ಸಂಪುಟ : 9 ಸಂಚಿಕೆ 107 ಪುಟ : 4 ಬೆಲೆ: 3.00 ಗುರುವಾರ ಮೇ 30 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 9 Issue : 107 Pages : 4 Price : 3.00 Thursday May 30 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

ಇಂದಿನ ನೀರು ಪೂರೈಕೆ ವಿವರ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ಅವಳಿ ನಗರದಲ್ಲಿ ಮೇ 30 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ : ದಖನಿಯವರ ಲೈನ್, ಗಿರಣಿಯವರ ಲೈನ್, ಧಾರವಾಡದವರ ಲೈನ್, ಶಿದ್ದಲಿಂಗನಗರ ಲೈನ್, ಕನ್ಯಾಳ ಅಗಸಿ ಲೈನ್, ಸಿದ್ದಲಿಂಗನಗರ ಭಾಗ-2, ನಾವಳ್ಳಿಯವರ ಲೈನ್, ರೊಟ್ಟಿಯವರ ಲೈನ್, ರಡ್ಡಿಯವರ ಲೈನ್, ಕೆಲವು ಉಳಿದ ಭಾಗಗಳು.

ವಾರ್ಡ್ ನಂ. 27ರಲ್ಲಿ ಕಾಶಿ ವಿಶ್ವನಾಥನಗರ, ಹನುಮಂತ ದೇವರ ಗುಡಿ ಲೈನ್, ಕಣವಿಯವರ ಲೈನ್, ದುರಗಮ್ಮನಗುಡಿ ಮಹಾಕೂಟೇಶ್ವರಗುಡಿ, ವಿ.ಆರ್.ಎಲ್. ಆಫೀಸ್.

ವಾರ್ಡ್ ನಂ. 30ರಲ್ಲಿ ಮುತ್ತಿನಪೆಂಡಿಮಠ ಲೈನ್, ಟಿ.ವಿ.ಎಸ್. ಶೋ ರೂಮ್. ಅಬ್ಬಿಗೇರಿ ಲೇಔಟ್., ಪೊಲೀಸ್ ಕ್ವಾರ್ಟರ್ಸ್, ಎಸ್.ಪಿ. ಆಫೀಸ್ ಲೈನ್, ಪಾಶಿಯವರ ಲೈನ್, ರೋಣದ ಅವರ ಲೈನ್, ಪುಟ್ಟರಾಜ ನಗರ, ಸಂಕಣ್ಣವರ ಲೇಔಟ್, ಕೇಶವನಗರ.

ವಾರ್ಡ್ ನಂ. 35ರಲ್ಲಿ 9ನಂ. ಶಾಲೆ, ಬಾಲಾಜಿನಗರ, ದೇವರಾಜ ಹಾಸ್ಟೆಲ್ ಲೈನ್, ಪತ್ತಾರ ಸರ್ ಲೈನ್, ಬಯಲು ಆಂಜನೆಯಗುಡಿ ಲೈನ್,

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸಲು ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 31ರಂದು ವಿಶ್ವ ತಂಬಾಕು ರಹಿತ ದಿನಾಚರಣೆ

■ ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವ ತಂಬಾಕು ರಹಿತ ದಿನಾಚರಣೆ ಅಂಗವಾಗಿ "ತಂಬಾಕು ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದು" (Protectecting Children from Tobacco Industry Interference) ಎಂಬ ಘೋಷ ವಾಕ್ಯದೊಂದಿಗೆ ಜಾಗೃತಿ ಜಾಥಾ ಕಾರ್ಯಕ್ರಮವು ಮೇ 31ರಂದು ಬೆಳಿಗ್ಗೆ 8:30 ಗಂಟೆಗೆ ಮುನ್ಸಿಪಲ್ ಜೂನಿಯರ್ ಕಾಲೇಜ ಆವರಣದಿಂದ ಚಾಲನೆಗೊಳ್ಳಲಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈತ ಬಾಂಧವರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ತೋಟಗಾರಿಕೆ ಇಲಾಖೆಯ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ಉತ್ಪಾದಿಸಿರುವ ಉತ್ತಮ ಗುಣಮಟ್ಟದ ಸಸಿಗಳು ಲಭ್ಯವಿರುವುತ್ತವೆ. ಇಲಾಖೆಯ ವತಿಯಿಂದ ತಯಾರಿಸಿದ ಉತ್ತಮ ತೆಂಗಿನ ಸಸಿಗಳು ಹಾಗೂ ಇತರೆ ಸಸಿಗಳ ಮಾರಾಟಕ್ಕೆ ಲಭ್ಯವಿದ್ದು ಅವುಗಳ ವಿವರ ಇಂತಿದೆ.

ಗದಗ ತೋಟಗಾರಿಕೆ ಕ್ಷೇತ್ರದಲ್ಲಿ 5338 ತೆಂಗು(ಅರಸಿಕೇರಿ ಟಾಲ್), 3000 ನುಗ್ಗೆ, 3900 ಕರಿಬೇವು,1000 ಸೀಬೆ, 500ನೇರಳೆ, ಗಜೇಂದ್ರಗಡ ತಾಲೂಕಿನ ರಾಜೂರು ತೋಟಗಾರಿಕೆ ಕ್ಷೇತ್ರದಲ್ಲಿ 2500 ತೆಂಗು(ಅರಸಿಕೇರಿ ಟಾಲ್), ಲಕ್ಷ್ಮೇಶ್ವರ ತಾಲೂಕಿನ ಮಹಾಂತಿನಮಠ ತೋಟಗಾರಿಕೆ ಕ್ಷೇತ್ರದಲ್ಲಿ 999 ತೆಂಗು(ಅರಸಿಕೇರಿ ಟಾಲ್), 6000 ಅಲಂಕಾರಿಕ ಸಸಿಗಳು, ಶಿರಹಟ್ಟಿ ತಾಲೂಕಿನ ನರ್ಸರಿ ಕಚೇರಿಯಲ್ಲಿ 690 ತೆಂಗು(ಅರಸಿಕೇರಿ ಟಾಲ್), 1000 ನಿಂಬೆ, 3000 ಕರಿಬೇವು,1500 ಸೀಬೆ, ಮುಂಡರಗಿ ತಾಲೂಕಿನ ಬ್ಯಾಲವಾಡಗಿ ತೋಟಗಾರಿಕೆ ಕ್ಷೇತ್ರದಲ್ಲಿ 3625 ತೆಂಗು(ಅರಸಿಕೇರಿ ಟಾಲ್), ಕೊಣ್ಣೂರು ತೋಟಗಾರಿಕೆ ಕ್ಷೇತ್ರದಲ್ಲಿ 1473 ನಿಂಬೆ,1942 ಕರಿಬೇವು,780 ಮಾವು, ನರಗುಂದ ನರ್ಸರಿ ಕಚೇರಿಯಲ್ಲಿ 2800 ತೆಂಗು(ಅರಸಿಕೇರಿ ಟಾಲ್), 1000 ನಿಂಬೆ,1000 ಕರಿಬೇವು, ಗದಗ ವೀರನಾರಾಯಣ ಉದ್ಯಾನವನದಲ್ಲಿ 9955 ಅಲಂಕಾರಿಕ ಸಸಿಗಳಿದ್ದು, ಜಿಲ್ಲೆಯಲ್ಲಿ ಒಟ್ಟು 15952 ತೆಂಗು(ಅರಸಿಕೇರಿ ಟಾಲ್), 3000ನುಗ್ಗೆ, 3473ನಿಂಬೆ, 9842 ಕರಿಬೇವು,780 ಮಾವು, 2500 ಸೀಬೆ, 500 ನೇರಳೆ,15955 ಅಲಂಕಾರಿಕ ಸಸಿಗಳು ಮಾರಾಟಕ್ಕೆ ಲಭ್ಯವಿದ್ದು. ಆಸಕ್ತ ಸಾರ್ವಜನಿಕರು, ರೈತ ಬಾಂದವರು ಖರೀದಿಸಲು ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಂಗಟಾಲೂರು ನೀರಾವರಿ ಯೋಜನೆ ಭೂಮಿಯಲ್ಲಿಯೇ ಬೃಹತ್ ವಿಂಡ್ ಫ್ಯಾನ್‌ಗಳ ಅಳವಡಿಕೆ

ಉಳ್ಳವರ ಪಾಲಾಗುತ್ತಿದೆಯಾ ರೈತರ ಭೂಮಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಬಯಲು ಸೀಮೆ ಗದಗ ಜಿಲ್ಲೆಯಲ್ಲಿ ಯಾವಾಗಲೂ ಬರಗಾಲದ ಛಾಯೆ ಆವರಿಸಿರುತ್ತದೆ. ಬೇಸಿಗೆಯ ದಿನಗಳಲ್ಲಂತೂ ಹನಿ ನೀರಿಗೂ ಹಾಹಾಕಾರವೇಳುತ್ತದೆ. ಇನ್ನು, ಅನ್ನದಾತರ ಪಾಡಂತೂ ಹೇಳತೀರದು. ಹಾಗೂ ಹೀಗೂ ಬೆಳೆ ಕೈಗೆ ಬಂತೆನ್ನುವಷ್ಟರಲ್ಲಿ ಬರಗಾಲ ಬರೆ ಎಳೆಯುತ್ತದೆ. ಈ ಭಾಗದ ಪ್ರತಿಯೊಬ್ಬ ರೈತನ ಮನಸ್ಸಿನಲ್ಲಿರುವ ಆಸೆಯೊಂದೇ, ಜಮೀನಿಗೆ ಒಂದಿಷ್ಟು ನೀರಾವರಿ ವ್ಯವಸ್ಥೆಯಿದ್ದರೆ...

ಈ ಭಾಗದ ಅನ್ನದಾತರ ಹೋರಾಟದ ಫಲವಾಗಿ ಸಿಂಗಟಾಲೂರು ಏತ ನೀರಾವರಿ ಯೋಜನೆ ಅನುಷ್ಠಾನ ಮಾಡಲಾಗಿದೆ. ಗದಗ ಜಿಲ್ಲೆಯ ಗದಗ ಹಾಗೂ ಮುಂಡರಗಿ ತಾಲೂಕುಗಳಲ್ಲಿ ಸಿಂಗಟಾಲೂರು ಏತ ನೀರಾವರಿ ಪ್ರದೇಶದಿಂದ ಹನಿ ನೀರಾವರಿ

ಪೈಪ್ ಅಳವಡಿಕೆ ಕಾರ್ಯ ನಡೆಯುತ್ತಿದೆ. ರೈತರ ಕನಸು ನನಸಾಗುವ ದಿನಗಳು ಹತ್ತಿರವಾಗುತ್ತಿದೆ ಅಂದುಕೊಳ್ಳುವಷ್ಟರಲ್ಲೇ ವಿಘ್ನಗಳೂ ಎದುರಾಗಿವೆ. ಪೈಪ್ ಅಳವಡಿಕೆಯಾಗುತ್ತಿರುವ ಜಮೀನುಗಳಲ್ಲಿಯೇ ಈಗ ವಿಂಡ್ ಫ್ಯಾನ್ ಅಳವಡಿಕೆ ಮಾಡಲಾಗುತ್ತಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

> ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಇಸ್ರೇಲ್ ಮಾದರಿಯ ಹನಿ ನೀರಾವರಿ ಯೋಜನೆ ಜಾರಿ ಮಾಡಿದೆ. ನೀರಾವರಿ ಜಮೀನಿನಲ್ಲಿ ವಿಂಡ್ ಫ್ಯಾನ್‌ಗಳು ತಲೆ ಎತ್ತುತ್ತಿವೆ. ಸರ್ಕಾರದ ಕೋಟ್ಯಾಂತರ ರೂಪಾಯಿ ಹಣ ಮಣ್ಣು ಪಾಲಾಗುತ್ತಿದೆ. ಕೂಡಲೇ ಜಿಲ್ಲಾಡಳಿತ ಹಾಗೂ ಸರ್ಕಾರ ಎಚ್ಚೆತ್ತು ನೀರಾವರಿ ಪ್ರದೇಶದಲ್ಲಿ ವಿಂಡ್ ಫ್ಯಾನ್ ತೆರವುಗೊಳಿಸಬೇಕಿದೆ.
>
> – ವೈ.ಎನ್. ಗೌಡರ್.
> ಅಧ್ಯಕ್ಷರು, ಮುಂಡರಗಿ ಅಭಿವೃದ್ಧಿ ಹೋರಾಟ ವೇದಿಕೆ.

▸▸ 3ನೇ ಪುಟಕ್ಕೆ

ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಭೆಯಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್

ಪಿಯುಸಿ ಫಲಿತಾಂಶ ಸುಧಾರಣೆಗೆ ಗಮನಹರಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಶೈಕ್ಷಣಿಕ ವರ್ಷದ ಫಲಿತಾಂಶ ಸುಧಾರಣೆಗೆ ಈಗಿನಿಂದಲೇ ಶ್ರಮವಹಿಸಿ, ಕಾರ್ಯೋನ್ಮುಖರಾಗಿ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಸೂಚಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿರು.

ಕಾಲೇಜುಗಳಲ್ಲಿ ಬಯೋ ಮೆಟ್ರಿಕ್ ಅಳವಡಿ ಸಲಾಗಿದ್ದು, ದಿನವಹಿ ಎರಡು ಬಾರಿ ಹಾಜರಾತಿ, ಬೆಳಗ್ಗೆ 10.30ರಿಂದ ಮಧ್ಯಾಹ್ನ 4.30ವರೆಗೆ ಕಾಲೇಜಿನಲ್ಲಿ ಸಿಬ್ಬಂದಿಗಳು ಕಡ್ಡಾಯವಾಗಿ ಹಾಜರಿರಬೇಕು ಎಂದರು.

ಶೈಕ್ಷಣಿಕ ಸಾಲಿನ ಫಲಿತಾಂಶ ಸುಧಾರಣಾ ಕ್ರಮಗಳಾದ ರೆಮಿಡಿಯಲ್ ಟೀಚಿಂಗ್ ಅಳವಡಿಕೆ, ನಿರಂತರ ಬೋಧನಾ ಕಾರ್ಯ, ವರ್ಗ ಶಿಕ್ಷಕರ ನೇಮಕ, ವಾರಕೊಮ್ಮೆ ವಿದ್ಯಾರ್ಥಿಗಳ ಹಾಜರಾತಿ ವಿಶ್ಲೇಷಣೆಯನ್ನು ಪಾಲಕರ ಗಮನಕ್ಕೆ ತರುಲು ತಿಳಿಸಿದರಲ್ಲದೆ, ತಾಲೂಕಾ ಮಟ್ಟದ ತಪಾಸಣೆಯ ಕಮಿಟಿ ರಚಿಸಿ, ತಾಲೂಕಾ ಕಮಿಟಿಯವರು ಪ್ರತಿ ವಾರ ಕಾಲೇಜಿಗೆ ಭೇಟಿ ನೀಡಿ ಪರಿಶೀಲನಾ ವರದಿ ನೀಡಬೇಕು ಎಂದು ಸೂಚಿಸಿದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಗಂಗಪ್ಪ ಕುರ್ತಕೋಟಿ ಮಾತನಾಡಿ, ವಿಷಯ ಉಪನ್ಯಾಸಕರು ಕ್ರಿಯಾಯೋಜನೆ ತಯಾರಿ, ಪಾಠ ಟಿಪ್ಪಣಿ, ಡೈರಿ ಬರವಣಿಗೆ ಸೇರಿದಂತೆ ಎಲ್ಲಾ ಹಂತದ ಪರೀಕ್ಷೆಗಳು, ಮೌಲ್ಯಮಾಪನ ಕಾರ್ಯ ನಿರ್ದಿಷ್ಟ ಅವಧಿಯಲ್ಲಿ ಮುಗಿಸಿ ಅಂಕಗಳ ದಾಖಲಿಸಿ, ಸದರಿ ಮಾಹಿತಿಗಳನ್ನು ಪಾಲಕರ ಗಮನಕ್ಕೆ ತರಬೇಕು ಮತ್ತು ಕಾಲೇಜಿನ ಚಲನವಲನ ರಜಿಸ್ಟರ್‌ನಲ್ಲಿ ಕಡ್ಡಾಯ ಸಹಿ ಹಾಕುವುದು, ಜೊತೆಗೆ ಕಡ್ಡಾಯವಾಗಿ ಸಮಯಪಾಲನೆಯೊಂದಿಗೆ ಕಾರ್ಯ ನಿರ್ವಹಿಸಲು ಸೂಚಿಸಿದರು.

ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಸುರೇಖಾ ಸೇರಿದಂತೆ ವಿವಿಧ ಕಾಲೇಜಿನ ಪ್ರಾಚಾರ್ಯರು ಹಾಜರಿದ್ದರು.

ಸಂಚಾರ ನಿಯಮಗಳ ಸಾರ್ವಜನಿಕ ಜಾಗೃತಿ ಕಾರ್ಯಕ್ರಮದಲ್ಲಿ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ

ಸಂಚಾರ ನಿಯಮ ಪಾಲನೆ ಪ್ರಜ್ಞಾವಂತ ನಾಗರಿಕರ ಮೊದಲ ಕರ್ತವ್ಯ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಪ್ರತಿ ವರ್ಷ ಅನೇಕ ವಾಹನ ಸವಾರರು ಹಾಗೂ ಸಂಚಾರಿಗಳು ಸಂಚಾರಿ ನಿಯಮ ಉಲಂಘನೆಯಿಂದ ಅಮಾಯಕವಾಗಿ ಜೀವ ಕಳೆದುಕೊಳ್ಳುತ್ತಾರೆ. ಸಂಚಾರ ನಿಯಮಗಳನ್ನು ಪಾಲಿಸುವುದು ಪ್ರಜ್ಞಾವಂತ ನಾಗರಿಕರ ಮೊದಲ ಕರ್ತವ್ಯವಾಗಿದೆ ಎಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ ಹೇಳಿದರು.

ಅವರು ಬುಧವಾರ ಸಂಜೆ ಧಾರವಾಡ ನಗರದ ಆಲೂರು ವೆಂಕಟರಾವ್ (ಜುಬ್ಲಿ ಸರ್ಕಲ್) ವೃತ್ತದಲ್ಲಿ ಸಂಚಾರ ನಿಯಮಗಳ ಸಾರ್ವಜನಿಕ ಜಾಗೃತಿ ಹಾಗೂ ದೋಷಪೂರಿತ ಸೈಲೆನ್ಸರ್‌ಗಳನ್ನು

ನಾಶಪಡಿಸುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಂಚಾರ ನಿಯಮಗಳ ಕುರಿತು ಪ್ರತಿ ವರ್ಷ ವಿವಿಧ ಕಾರ್ಯಕ್ರಮಗಳ ಮೂಲಕ ಶಾಲಾ ಕಾಲೇಜುಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಜನಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಆದರೂ ವಾಹನ ಸವಾರರು ಸರಿಯಾಗಿ ಹೆಲ್ಮೆಟ್ ಧರಿಸುವುದಿಲ್ಲ, ಸೀಟ್ ಬೆಲ್ಟ್ ಧರಿಸುವುದಿಲ್ಲ, ಸಿಗ್ನಲ್ ಜಂಪ್ ಮಾಡುವುದು, ಸಂಚಾರಿ ಸಾಮಾನ್ಯ ನಿಯಮಗಳನ್ನು ಸಹ ಪಾಲಿಸುವುದಿಲ್ಲ. ಇದರಿಂದಾಗಿ ತಮ್ಮ ಅಮೂಲ್ಯ ಜೀವವನ್ನೇ ಕಳೆದುಕೊಳ್ಳುತ್ತಾರೆ ಎಂದು ಅವರು ತಿಳಿಸಿದರು.

ಅವಳಿ ನಗರದಲ್ಲಿ ವಾಹನ ದಟ್ಟಣೆ ಮಾರ್ಗಗಳನ್ನು ಗುರುತಿಸಲಾಗಿದೆ. ಅವುಗಳಿಗೆ ಪರ್ಯಾಯ ವ್ಯವಸ್ಥೆ ಮಾಡುವ ಕುರಿತು ಪರಿಶೀಲಿಸಲಾಗುತ್ತಿದೆ. ಪಾಲಕರು 18 ವರ್ಷದೊಳಗಿನ ಮಕ್ಕಳಿಗೆ ವಾಹನ ಚಾಲನೆಗೆ ನೀಡಬಾರದು. ಇದು ಅಪರಾಧವಾಗಿದ್ದು, ಅಂತ ಪಾಲಕರಿಗೆ ರೂ. 25 ಸಾವಿರ ದಂಡ ಮತ್ತು ಜೈಲು ವಾಸದ ಶಿಕ್ಷೆ ಇದೆ. ಸಾರ್ವಜನಿಕರ ಸಹಕಾರದಿಂದ ಮಾತ್ರ ಸುಗಮ ಮತ್ತು ಸುಸೂತ್ರ ಸಂಚಾರ ಹೊಂದಲು ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ಧಾರವಾಡ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೋಟಾರ್ ಸೈಕಲ್ ಸವಾರರು ತಮ್ಮ ವಾಹನಗಳಿಗೆ ಅನಧಿಕೃತವಾಗಿ ದೋಷಪೂರಿತ ಕರ್ಕಶ ಶಬ್ದವನ್ನುಂಟುಮಾಡುವ ಸೈಲೆನ್ಸರ್‌ಗಳನ್ನು ಹಾಕಿಕೊಂಡು ಸಂಚರಿಸಿ ಸಾರ್ವಜನಿಕರಿಗೆ ತೊಂದರೆಯನ್ನುಂಟು ಮಾಡುತ್ತಿದ್ದ ಹಿನ್ನೆಲೆಯಲ್ಲಿ ಅಧಿಕಾರಿಗಳ ಮತ್ತು ಸಿಬ್ಬಂದಿಗಳ ತಂಡವನ್ನು ರಚಿಸಿ ಜಾಗೃತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಮಾರ್ಚ್ 1, 2024ರಿಂದ ಮೇ 29, 2024ರವರೆಗೆ ಧಾರವಾಡ

> ಮುಂದಿನ ದಿನಗಳಲ್ಲಿ ಯಾವುದಾದರೂ ದೋಷಪೂರಿತ ಸೈಲೆನ್ಸರ್ ಇರುವ ವಾಹನಗಳು ಕಂಡುಬಂದಲ್ಲಿ ಸಾರ್ವಜನಿಕರು ಕೂಡಲೇ ಮೋಟಾರ್ ಸೈಕಲ್ ನಂಬರ್ ಸಮೇತ ಫೋಟೋ, ವಿಡಿಯೋ ಮೂಲಕ ಸಂಚಾರ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 9480802037ಗೆ ವಾಟ್ಸಪ್ ಮೂಲಕ ಕಳುಹಿಸಬಹುದು. ಮಾಹಿತಿ ನೀಡಿದವರ ವಿವರವನ್ನು ಗೌಪ್ಯವಾಗಿ ಇಡಲಾಗುವುದು ಎಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತೆ ರೇಣುಕಾ ಸುಕುಮಾರ ಈ ಸಂದರ್ಭದಲ್ಲಿ ತಿಳಿಸಿದರು.

ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಚರಣೆ ನಡೆಸಿ ಒಟ್ಟು 240 ಸೈಲೆನ್ಸರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಮೌಲ್ಯ ಸುಮಾರು ರೂ. 12 ಲಕ್ಷ ರೂ.ಗಳಾಗಿದೆ. ದೋಷಪೂರಿತ ಕರ್ಕಶ ಸೈಲೆನ್ಸರ್‌ಗಳನ್ನು ವಶಪಡಿಸಿಕೊಂಡು ವಾಹನ ಸವಾರರಿಗೆ ತಲಾ 500 ರೂ ದಂಡ ವಿಧಿಸಿ, ವಾಹನಗಳನ್ನು ಬಿಡುಗಡೆ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಉಪ ಪೊಲೀಸ್ ಆಯುಕ್ತರಾದ ಕುಶಲ್ ಚೌಕ್ಸೆ, ರವೀಶ ಸಿ.ಆರ್., ಸಂಚಾರ ಸಹಾಯಕ ಪೊಲೀಸ್ ಆಯುಕ್ತ ವಿನೋದ ಮುಕ್ತೆದಾರ, ಸಂಚಾರಿ ಪೊಲೀಸ್ ಇನಸ್ಪೆಕ್ಟರ್ ಶ್ರೀನಿವಾಸ ಮೇಟಿ, ಪಿಎಸ್‌ಐ ನಾರಾಯಣ ಪಟವರ್ಧನ, ಶೋಭಾ ಕಂಬಿ, ಸೇರಿದಂತೆ ಇತರ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 'ಯಮ ಕಿಂಕರ' ರೂಪಕದ ಮೂಲಕ ಸಂಚಾರ ನಿಯಮಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಸಂಪಾದಕೀಯ

ರಾಜ್ಯ ಸರಕಾರ ಬೀಜ ಖರೀದಿಗೆ ಸಬ್ಸಿಡಿ ಘೋಷಣೆ ಮಾಡಲಿ

ಮುಂಗಾರು ಪೂರ್ವ ಮಳೆಯಿಂದ ಸಂತುಷ್ಟರಾಗಿರುವ ರೈತ ಸಮೂಹ ಬಿತ್ತನೆಗೆ ಮುಂದಾಗಿದೆ. ಅದರಲ್ಲೂ ಉತ್ತರ ಕರ್ನಾಟಕ ಭಾಗದ ರೈತರು ಹೆಸರು ಬಿತ್ತನೆಯನ್ನ ಆರಂಭಿಸಿದ್ದಾರೆ. ಆದರೆ ಈ ಬಾರಿ ಬಿತ್ತನೆ ಬೀಜದರ ಶೇಕಡ 30ರಷ್ಟು ಏರಿಕೆಯಾಗಿರುವುದು ರೈತರಿಗೆ ಸಂಕಷ್ಟ ತಂದಿದೆ.

ಇಷ್ಟು ದಿನ ತೀವ್ರ ಬರದಿಂದ ತತ್ತರಿಸಿದ್ದ ರೈತರಿಗೆ ಮುಂಗಾರು ಪೂರ್ವ ಮಳೆ ಹೊಸ ಭರವಸೆ ಮೂಡಿಸಿತ್ತು. ರೈತರು ಅತ್ಯುತ್ಸಾಹದಿಂದ ಬಿತ್ತನೆ ಕಾರ್ಯ ಆರಂಭಿಸಬೇಕು ಎನ್ನುವಾಗಲೇ, ಬಿತ್ತನೆ ಬೀಜದ ದರ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಯಿತು.

ಈ ಬಗ್ಗೆ ರಾಜ್ಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದಂತೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ. ರಾಜ್ಯದಲ್ಲಿ ಎದುರಾದ ತೀವ್ರ ಬರದ ಕಾರಣದಿಂದ ಬಿಜೋತ್ಪಾದನೆ ಕುಂಠಿತವಾಗಿದೆ. ಸಹಜವಾಗಿ ಬಿಜೋತ್ಪಾದನೆ ಮಾಡಿದ ರೈತರು ದುಪ್ಪಟ್ಟಗಳಿಗೆ ಬೀಜವನ್ನ ಮಾರಾಟ ಮಾಡಿದ್ದಾರೆ. ಇದರಿಂದ ಬೀಜ ಖರೀದಿಸುವ ರೈತರಿಗೆ ದರ ಏರಿಕೆಯ ಬಿಸಿ ಎದುರಾಗಿದೆ. ಆದರೆ ಬಿಜೋತ್ಪಾದನೆಯ ಮಾಡುವ ರೈತರಿಗೆ ಇದರಿಂದ ಉತ್ತಮ ಲಾಭವಾಗಿದೆ ಎಂದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುವ ಮಾತಿನಲ್ಲಿ ಸತ್ಯಾಂಶವಿದೆ. ಬಿಜೋತ್ಪಾದನೆ ಮಾಡುವ ರೈತರಿಗೆ ಈ ಬಾರಿ ಒಳ್ಳೆಯ ಕಾಲ ಬಂದಿದೆ. ಆದರೆ ಬೀಜ ಖರೀದಿಸುವ ರೈತರಿಗೆ ಯಾವಾಗ ಒಳ್ಳೆಯ ಕಾಲ ಬರುತ್ತದೆ?

ಬೀಜ ಖರೀದಿಸಿ ಬಿತ್ತನೆ ಮಾಡಿ, ಮಳೆಯಲ್ಲದೆ ಸಂಕಷ್ಟ ಎದುರಿಸಿದ ರೈತನಿಗೆ, ಈಗ ಬೀಜ ಖರೀದಿಯೂ ಮಾಡಲಾಗದಷ್ಟು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾನೆ. ಸರ್ಕಾರ ಇಂತಹ ಸಂದರ್ಭದಲ್ಲಿ, ಬೀಜ ನಿಗಮಕ್ಕೆ ಸಹಾಯಧನ, ಸಬ್ಸಿಡಿ ನೀಡಿ, ಬರದಿಂದ ತತ್ತರಿಸಿದ್ದ ರೈತರಿಗೆ ನೆರವು ನೀಡುವ ಕೆಲಸ ಮಾಡಬೇಕಿತ್ತು.

ರಾಜ್ಯ ಸರ್ಕಾರ ಬಿತ್ತನೆ ಬೀಜದ ದರ ಕಡಿಮೆ ಮಾಡುವುದನ್ನು ಬಿಟ್ಟು, ನೆರೆಯ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಬಿತ್ತನೆ ಬೀಜದ ದರ ಕಡಿಮೆ ಎನ್ನುವ ಮೂಲಕ, ದರ ಏರಿಕೆಯನ್ನು ಸಮರ್ಥಿಸಿಕೊಳ್ಳುವ ಕೆಲಸ ಮಾಡುತ್ತಿದೆ. ಸರ್ಕಾರದ ಈ ಧೋರಣೆ ಒಳ್ಳೆಯದಲ್ಲ. ಅಗತ್ಯ ವಸ್ತುಗಳ ಬೆಲೆ ಏರಿಕೆ ಕಡಿಮೆ ಮಾಡಲು ಸಾಧ್ಯವಾಗದಿದ್ದರೂ ಕನಿಷ್ಠ ರೈತರಿಗೆ ಕಡಿಮೆ ಬೆಲೆಯಲ್ಲಿ ಬೀಜ ದೊರೆಯುವಂತೆ ಆಗಬೇಕು.

ಅದೊಂದು ವಿಡಿಯೋ ಒಂದು ಜೀವವನ್ನೇ ಬಲಿ ಪಡೆಯಿತು

ವೈರಲ್ ವಿಡಿಯೋಗಳಿಂದೇನು ಲಾಭ?

ಕಳೆದ ತಿಂಗಳು ಚೆನ್ನೈನ ಹೊರವಲಯದ ಅಪಾರ್ಟ್‌ಮೆಂಟ್ ಒಂದರಲ್ಲಿ ನಡೆದ ಘಟನೆ ಸೋಶಿಯಲ್ ಮೀಡಿಯಾದಲ್ಲೆಲ್ಲಾ ಭಾರೀ ಸದ್ದು ಮಾಡಿತ್ತು, ಟ್ರೋಲ್ ಆಗಿತ್ತು ಕೂಡ. ಅಪಾರ್ಟ್‌ಮೆಂಟ್‌ನ ನಾಲ್ಕನೇ ಮಹಡಿಯಲ್ಲಿ 33 ವರ್ಷದ ಟೆಕ್ಕಿಯೊಬ್ಬರ ಮನೆಯಿದೆ. ಪತಿಯೊಂದಿಗೆ ಅಲ್ಲಿ ವಾಸಿಸುತ್ತಿದ್ದ ಟೆಕ್ಕಿ, ಪತಿ ಹೊರಗೆಲ್ಲೋ ಹೋಗಿದ್ದ ಸಮಯದಲ್ಲಿ ಮನೆಯ ಬಾಲ್ಕನಿಯಲ್ಲಿ ನಿಂತು ತನ್ನ ಮಗುವಿನ ಆರೈಕೆ ಮಾಡುತ್ತಿದ್ದರು.

ಅದೇನು ಸಮಯ ಕೆಟ್ಟಿತ್ತೋ ಗೊತ್ತಿಲ್ಲ, ಕೈಲಿದ್ದ ಮಗು, ತಾಯಿಯ ಕೈಯಿಂದ ಆಯ ತಪ್ಪಿ ಎರಡನೇ ಮಹಡಿಗೆ ನೆರಳಿಗೆಂದು ಹಾಕಿದ್ದ ತಗಡಿನ ಹೊದಿಕೆಯ ಮೇಲೆ ಬಿದ್ದಿದೆ. ಮುಂದೇನು? ದಿಕ್ಕು ತೋಚದ ತಾಯಿ ಕಿರುಚಿಕೊಂಡಿದ್ದಾಳೆ. ಅಪಾರ್ಟ್‌ಮೆಂಟ್‌ನ ಅಕ್ಕಪಕ್ಕದ ನಿವಾಸಿಗಳು ದೌಡಾಯಿಸಿ ನೋಡಿದರೆ, ಮಗು ತಗಡಿನ ಹೊದಿಕೆಯ ಮೇಲೆ ನಿಧಾನವಾಗಿ ಜಾರುತ್ತ ಕೆಳಕ್ಕೆ ಸಾಗುತ್ತಿದೆ. ಕೆಳಗೆ ಇನ್ನೂ 2 ಅಂತಸ್ತು ಕಳೆದರೆ ನೆಲವೇ ಗತಿ. ತಡಮಾಡದ ಕೆಲ ಧೈರ್ಯಶಾಲಿಗಳು ಏನೇನೋ ಕಸರತ್ತು ನಡೆಸಿ ಮಗುವನ್ನು ಸುರಕ್ಷಿತವಾಗಿ ಬಚಾವ್ ಮಾಡಿ ತಾಯಿಯ ಮಡಿಲಿಗಿಟ್ಟರು.

ಪ್ರಕರಣವೇನೋ ಸುಖಾಂತ್ಯವಾಯಿತು ನಿಜ. ಆದರೆ, ಮುಂದಿನ ಪರಿಣಾಮ ಮಾತ್ರ ಕೆಟ್ಟದಾಗಿಯೇ ಇತ್ತು ಎಂಬುದು ಒಂದು ತಿಂಗಳು ಕಳೆದ ಮೇಲೆ, ಮೊನ್ನೆಯಷ್ಟೇ ಗೊತ್ತಾಗಿದೆ. ಅಂದು ನಡೆದ ಘಟನೆಯನ್ನು ಅದೇ ಅಪಾರ್ಟ್‌ಮೆಂಟ್‌ನ ನಿವಾಸಿಗಳ್ಯಾರೋ ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಮಾಡಿ ಸೋಸಿಯಲ್ ಮೀಡಿಯಾಗಳಲ್ಲಿ ಹರಿಬಿಟ್ಟಿದ್ದರು. ಮಗುವನ್ನು ಸುರಕ್ಷಿತವಾಗಿಸಿದ ಅಪಾರ್ಟ್‌ಮೆಂಟ್ ನಿವಾಸಿಗಳ ಬಗ್ಗೆ ಭರ್ಜರಿ ಮೆಚ್ಚುಗೆ ವ್ಯಕ್ತವಾಗಿತ್ತು. ಭೇಷ್ ಎಂದರು, ಬೆನ್ನು ತಟ್ಟಿದರು, ದೇವರು ದೊಡ್ಡವ ಮಗು ಉಳೀತಲ್ಲ ಎಂದರು. ಕೆಲಸ-ಕಾರ್ಯವಿಲ್ಲದ ನಮ್ಮ ಸೋಶಿಯಲ್ ಮೀಡಿಯಾ ವೀರರು ಒಂದೆರಡು ದಿನ ಕಳೆಯುವುದರೊಳಗೆ ಆ ವಿಡಿಯೋವನ್ನು ಎಷ್ಟು ಸಾಧ್ಯವೋ ಅಷ್ಟು ಹಂಚಿ ಹರಿದು ವೈರಲ್ ವಿಡಿಯೋ ಎಂಬ ಹಣೆಪಟ್ಟಿ ಕಟ್ಟಿದರು.

ಎಲ್ಲೆಲ್ಲೋ ಸುತ್ತಾಡಿ ಬಂದ ಆ ವಿಡಿಯೋವನ್ನು ಈ ತಾಯಿಯೂ ನೋಡಿ ಆಘಾತಕ್ಕೊಳಗಾಗಿದ್ದಾಳೆ. ಅಂದು ಹೀಗೆಲ್ಲಾ ಆಯ್ತಾ ಎಂದಲ್ಲ, ಆ ವಿಡಿಯೋಗೆ ನಮ್ಮ ಸಮಾಜದ ಪ್ರಜ್ಞಾವಂತರೆನಿಸಿಕೊಂಡ ಬಳಕೆದಾರರ ಥರಾವರಿ ಕಮೆಂಟ್ ಓದಿ ಅಕ್ಷರಶಃ ಶಾಕ್ ಆಗಿದ್ದಾರೆ, ಖಿನ್ನತೆಗೂ ಒಳಗಾಗಿದ್ದಾರೆ. ನಿಜಕ್ಕೂ ಆ ಮಗು ಮಹಡಿಯಿಂದ ಕೆಳಕ್ಕೆ ಬೀಳುವ ಸಂದರ್ಭ ಯಾಕೆ ಬಂತು ಎಂಬುದನ್ನೂ ವಿಚಾರ ಮಾಡದೆ ಅವಳನ್ನು ಕೆಟ್ಟ ತಾಯಿ ಎಂದು ಕರೆದರು. ಇಂಥಾ ಸೌಭಾಗ್ಯಕ್ಕೆ ನಿನಗ್ಯಾಕೆ ಮಗು ಬೇಕಿತ್ತು ಎಂದು ಜರಿದರು.

ಈಗಿನ್ನೂ ಆರೇಳು ತಿಂಗಳ ಮಗುವಿದೆ ಎಂದಾದರೆ, 9 ತಿಂಗಳು ಆ ಮಗುವನ್ನು ಹೊತ್ತು-ಹೆತ್ತು ಬೆಳೆಸುತ್ತಿದ್ದ, ಈಗಷ್ಟೇ ಬಾಣಂತನದ ಆರೈಕೆ ಮುಗಿಸಿದ್ದ ಆ ತಾಯಿಯ ಮಾನಸಿಕ ಸ್ಥಿತಿ ಹೇಗಿದ್ದೀತು ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲದ ನಮ್ಮ ಸೋಶಿಯಲ್ ಮೀಡಿಯಾ ಶೂರರು ಈ ವಿಧಾನದಲ್ಲಿ ಆ ತಾಯಿಯನ್ನು ಹೆಜ್ಜೂಕಡಿಮೆ ಹುಚ್ಚಿಯಾಗಿಸಿದರು. ಆಕೆ ಸುಶಿಕ್ಷಿತಳು, ಮೇಲಾಗಿ ಟೆಕ್ಕಿ ಹೌದಾದರೂ, ಮಾನಸಿಕವಾಗಿ ಧೈರ್ಯಗುಂದಬಾರದು, ಖಿನ್ನತೆಗೆ ಒಳಗಾಗಬಾರದು ಎಂದೇನೂ ಇಲ್ಲವಲ್ಲ?

ಘಟನೆಯ ನಂತರ, ಆಕೆ ಮತ್ತು ಆಕೆಯ ಪತಿ ಕೊಯಮತ್ತೂರಿನ ತಮ್ಮ ಊರಿಗೆ ತೆರಳಿದ್ದರು. ತಾನು ಮಾನಸಿಕವಾಗಿ ಅನುಭವಿಸುತ್ತಿರುವ ಹಿಂಸೆ, ಯಾತನೆಯನ್ನು ಯಾರಲ್ಲೂ ಹೇಳಿಕೊಳ್ಳಲಾರದೆ, ತನ್ನದೇನೂ ತಪ್ಪಿಲ್ಲ ಎಂದು ಈ ಜಗತ್ತಿಗೆ ಅರ್ಥ ಮಾಡಿಸುವ ಗೋಜಿಗೂ ಹೋಗದೇ ನೇಣು ಬಿಗಿದು ಈ ಲೋಕದ ಯಾತ್ರೆ ಮುಗಿಸಿಬಿಟ್ಟಳು. ಈಗ, ಆಕೆಯನ್ನು ಯಾರೂ ಟ್ರೋಲ್ ಮಾಡುವುದಿಲ್ಲ. ನೀನೆಂಥಾ ತಾಯಿ ಕಣವ್ವಾ ಎಂದು ಯಾರೂ ಹಂಗಿಸುವುದಿಲ್ಲ. ಜರಿಯುವುದಿಲ್ಲ.

ಎಂಥಾ ಸಮಾಜ ಅಲ್ವಾ ನಮ್ಮದು? ಒಬ್ಬೊಬ್ಬರ ಒಂದೊಂದು ಮಾತು, ಕಮೆಂಟ್‌ಗಳೂ ಆ ತಾಯಿಗೆ ಸಾವಿನೆಡೆಯ ದಾರಿಯನ್ನೇ ತೋರಿಸಿಬಿಟ್ಟವು. ನಿಜವಾಗಿಯೂ ಯಾವುದಕ್ಕೆ ಮಹತ್ವ ಕೊಡಬೇಕೆಂಬ ಕನಿಷ್ಠ ಜ್ಞಾನವೂ ಇಲ್ಲದ ಮರ್ಕಟರಂತೆ ವರ್ತಿಸುವ ಈ ಜನರಿಗೆ ಯಾವತ್ತಾದರೂ ಬುದ್ಧಿ ಬಂದೀತಾ? ಹೋದ ಆಕೆಯ ಜೀವ ಮತ್ತೆ ಹಿಂದಿರುಗೀತಾ, ಆ ಆರೇಳು ತಿಂಗಳ ಮಗುವಿಗೆ ಮತ್ತೆ ತಾಯಿಯ ಮಮತೆಯೇ ಸಿಗದಂತಾಗಿಬಿಟ್ಟಿತಲ್ಲ...

ಯೋಚಿಸಿ ಸ್ನೇಹಿತರೇ. ಎಲ್ಲೋ ಯಾವುದೋ ಒಂದು ರೀಲ್ಸ್, ವಿಡಿಯೋ ಬಂತೆಂದರೆ, ಹಿಂದೆ ಮುಂದೆ ಯೋಚಿಸದೇ ಲೈಕ್ ಒತ್ತುವುದು, ಕಮೆಂಟ್ ಮಾಡುವುದು, ಶೇರ್ ಮಾಡಡುವುದು ಮಾಡುತ್ತೇವಲ್ಲ, ಪ್ರಯೋಜನಕ್ಕೆ ಬರುವ ಎಷ್ಟು ವಿಚಾರಗಳನ್ನು ಶೇರ್ ಮಾಡುತ್ತೇವೆ? ಉತ್ತಮ ಸಂದೇಶ ಹಂಚುವ ಯಾವ ವಿಡಿಯೋ, ರೀಲ್ಸ್‌ಗೆ 'ಚೆನ್ನಾಗಿದೆ' ಎನ್ನುತ್ತೇವೆ? ಯೋಚಿಸಿ. ತಲೆಯೊಳಗೆ ಮೆದುಳಿದ್ದರೆ ಅದಕ್ಕೂ ಒಂದಿಷ್ಟು ಕೆಲಸ ಕೊಡಿ. ಸುಮ್ಮನೇ ಸನ್ನಿಗೊಳಗಾದವರಂತೆ ವೈರಲ್ ಎಂದು ಬೆನ್ನುಬಿದ್ದರೆ ಇಂಥ ಘಟನೆಗಳು ನಡೆಯುತ್ತಲೇ ಇರುತ್ತವೆ.

– ಸತೀಶ್ ಭಟ್, ಮಾಗೋಡ್.

ಕನ್ನಡ ಗ್ರಂಥಾಲಯಕ್ಕೆ ಪುಸ್ತಕಗಳ ಕೊಡುಗೆ



■ ವಿಜಯಸಾಕ್ಷಿ ಸುದ್ದಿ, ಗದಗ

ನಿವೃತ್ತ ಜಿಲ್ಲಾ ನ್ಯಾಯಧೀಶರು ಮತ್ತು ಜಿಲ್ಲಾಧಿಕಾರಿಗಳ ಕಚೇರಿಯ ಕಾನೂನು ಸಲಹೆಗಾರರಾದ ಎಸ್.ಜಿ.ಪಲ್ಲೇದ ಅವರು ಕನ್ನಡ ಗ್ರಂಥಾಲಯಕ್ಕೆ 600 ಕ್ಕೂ ಹೆಚ್ಚು ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದರು.

ಸೋಮವಾರದಂದು ಅವರು ವಿದ್ಯಾಭ್ಯಾಸ ಮಾಡಿದ ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಜೆ.ಟಿ.ಕಾಲೇಜಿಗೆ ಪುಸ್ತಕಗಳನ್ನು ದಾನವಾಗಿ ನೀಡಿದರು.

ಅಖಂಡ 30ವರ್ಷಗಳ ನ್ಯಾಯಾಂಗ ಸೇವೆಯ ಅವಧಿಯಲ್ಲಿ ಹಾಗು ಜಿಲ್ಲಾ ಗ್ರಾಹಕರ ವೇದಿಕೆಯ ಅಧ್ಯಕ್ಷರಾಗಿ ಎಲ್ಲಾ ತೀರ್ಪುಗಳನ್ನು ಕನ್ನಡದಲ್ಲಿಯೇ ನೀಡಿದ್ದು ವಿಶೇಷ.

ಕನ್ನಡ ಭಾಷೆ, ಸಂಸ್ಕೃತಿ ಪುಸ್ತಕ ಬಗ್ಗೆ ಅಪಾರ ಅಭಿಮಾನ ಆಸಕ್ತಿ ಹೊಂದಿ ತಮ್ಮ ಸೇವಾ ಅವಧಿಯಲ್ಲಿ ಸಂಗ್ರಹಿಸಿದ ಮೌಲಿಕ ಕನ್ನಡ ಗ್ರಂಥಗಳು ಮುಂದಿನ ಯುವ ಜನಾಂಗದವರಲ್ಲಿ ಕನ್ನಡ ಭಾಷೆ ಸಂಸ್ಕೃತಿ ನಾಡಿನ ಬಗ್ಗೆ ಅಭಿಮಾನ ಜೊತೆಗೆ ಓದುವ ಹವ್ಯಾಸ ರೂಡಿಸಿಕೊಳ್ಳಲೆಂದು ತಾವು ಸಂಗ್ರಹಿಸಿದ ಪುಸ್ತಕಗಳನ್ನು ದಾನವಾಗಿ ನೀಡಿದ್ದಾರೆ.

ಈ ಸಂದರ್ಭದಲ್ಲಿ ಗದಗ ಜಿಲ್ಲೆಯ ಕ.ಸಾ.ಪ. ಅಧ್ಯಕ್ಷರಾದ ವಿವೇಕಾನಂದಗೌಡ ಪಾಟೀಲ್, ಜಿ.ಬಿ.ಪಾಟೀಲ್, ವಿಶ್ವನಾಥ ಸೇರಿದಂತೆ ಸಿಬ್ಬಂದಿ ವರ್ಗ ಹಾಜರಿದ್ದರು.

ರೆಮಲ್ ಚಂಡಮಾರುತ: 37 ಜನ ಸಾವು

■ ವಿಜಯಸಾಕ್ಷಿ ಸುದ್ದಿ, ಮಿಜೋರಾಂ

ರೆಮಲ್ ಚಂಡಮಾರುತದಿಂದ ಉಂಟಾದ ಭಾರೀ ಮಳೆ ಮತ್ತು ಗುಡುಗು ಸಹಿತ ಮಿಜೋರಾಂ ಸೇರಿದಂತೆ ಈಶಾನ್ಯ ರಾಜ್ಯಗಳಲ್ಲಿ ಕನಿಷ್ಠ 37 ಜನರು ಸಾವನ್ನಪ್ಪಿದ್ದು, ಹಲವರು ನಾಪತ್ತೆಯಾಗಿದ್ದಾರೆ. ಮಳೆಯಿಂದ ಮನೆಗಳು ಧ್ವಂಸಗೊಂಡು ವಿದ್ಯುತ್ ತಂತಿಗಳು ನೆಲಕ್ಕುರುಳಿದ್ದರಿಂದ, ನೂರಾರು ಮಂದಿ ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆಯಬೇಕಾಯಿತು. ಮಿಜೋರಾಂ ಈ ಪ್ರದೇಶದಲ್ಲಿ ಅತಿ ಹೆಚ್ಚು ಹಾನಿಗೊಳಗಾದ ರಾಜ್ಯವಾಗಿದೆ.

ರೆಮಲ್ ಚಂಡಮಾರುತವು ಮಿಜೋರಾಂನ ರಾಜಧಾನಿ ಐಜ್ವಾಲ್‌ನ ಮೆಲ್ತಮ್, ಥ್ಲಿಮೆನ್, ಫಾಲ್ಕಾವ್ನ್ ಮತ್ತು ಸೇಲಂ ವೆಂಗ್ ಪ್ರದೇಶಗಳಲ್ಲಿ 27 ಜನರನ್ನು ಬಲಿ ತೆಗೆದುಕೊಂಡಿದೆ ಎಂದು ರಾಜ್ಯ ಸರ್ಕಾರ ಮಂಗಳವಾರ ಪ್ರಕಟಣೆಯಲ್ಲಿ ತಿಳಿಸಿದೆ. ಪರಿಹಾರ ತಂಡಗಳು ಇದುವರೆಗೆ 27 ಮಂದಿಯ ಮೃತದೇಹಗಳನ್ನು ಹೊರತೆಗೆದಿದ್ದು, ನಗರದಲ್ಲಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಲಾಲ್ದುಹೋಮ ಅವರು ಮೃತರಿಗೆ ರಾಜ್ಯ ವಿಪತ್ತು ಪರಿಹಾರ ನಿಧಿನಿಂದ (ಎಸ್‌ಡಿಆರ್‌ಎಫ್) 15 ಕೋಟಿ ಮೀಸಲಿಟ್ಟಿದ್ದು, ಪ್ರತಿಯೊಬ್ಬರಿಗೆ ತಲಾ 4 ಲಕ್ಷ ಪರಿಹಾರವನ್ನು ಘೋಷಿಸಿದ್ದಾರೆ.

ಇದಲ್ಲದೆ, ಚಂಡಮಾರುತದ ನಂತರ ರಾಜ್ಯದಲ್ಲಿ ಭಾರೀ ಮಳೆ ಮತ್ತು ಬಲವಾದ ಗಾಳಿಯಿಂದಾಗಿ ಅಸ್ಸಾಂನಲ್ಲಿ ನಾಲ್ವರು ಸಾವನ್ನಪ್ಪಿ, 18 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಅಸ್ಸಾಂನ ಸೋನಿತ್‌ಪುರ ಜಿಲ್ಲೆಯಲ್ಲಿ ಶಾಲಾ ಬಸ್ ಮೇಲೆ ಮರ ಬಿದ್ದು 12 ಮಕ್ಕಳು ಗಾಯಗೊಂಡಿದ್ದಾರೆ. ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷ ಅಧಿಕಾರಿಗಳ ಮರು ನೇಮಕಕ್ಕೆ ಆಗ್ರಹ

■ ವಿಜಯಸಾಕ್ಷಿ ಸುದ್ದಿ, ಗದಗ

ದಕ್ಷ, ಪ್ರಾಮಾಣಿಕ ಡಿಸಿಪಿ ರಾಜೀವ ಎಂ. ಮತ್ತು ಎಸಿಪಿ ವಿ.ಟಿ. ವಿಜಯಕುಮಾರ ಅವರನ್ನು ಏಕಾಏಕಿ ಅಮಾನತು ಮಾಡಿ ದಲಿತ ವಿರೋಧಿ ನೀತಿಯನ್ನು ಅನುಸರಿಸಿದ್ದು, ಕೂಡಲೇ ಈ ಆದೇಶವನ್ನು ರದ್ದುಗೊಳಿಸಿ ಕರ್ತವ್ಯಕ್ಕೆ ಮರು ನೇಮಕ ಮಾಡಿಕೊಳ್ಳಬೇಕೆಂದು ಕರ್ನಾಟಕ ಛಲವಾದಿ ಮಹಾಸಭಾ ಗದಗ ಘಟಕದಿಂದ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಜಿಲ್ಲಾಧ್ಯಕ್ಷ ಎಲ್. ನಾರಾಯಣಸ್ವಾಮಿ ಮಾತನಾಡಿ, ಯಾರದೋ ಕುತಂತ್ರ, ಕೆಲವು ಪಟ್ಟಭದ್ರ ಹಿತಾಸಕ್ತಿಗಳು, ಜಾತಿವಾದಿಗಳು ಈ ಇಬ್ಬರು ಅಧಿಕಾರಿಗಳು ದಲಿತರು ಎಂಬ ಕಾರಣಕ್ಕೆ ಸುಳ್ಳು ಆಪಾದನೆಯನ್ನು ಮಾಡಿ ಅಮಾನತುಗೊಳಿಸಿರುವುದು ಖೇದಕರ ಎಂದರು. ಈ ಸಂದರ್ಭದಲ್ಲಿ ಪ್ರಕಾಶ ಕೆಲ್ಲೂರ, ಬಸವರಾಜ ಈರಣ್ಣವರ, ಯಮನೂರಪ್ಪ ಕೋಟಗಾರ ಮುಂತಾದವರು ಉಪಸ್ಥಿತರಿದ್ದರು.

ಸರಕಾರಿ ಕೋಟಾದಡಿ ಸೀಟ್ ಪಡೆದವರಿಗೆ ಹೈಕೋರ್ಟ್ ಸೂಚನೆ

ಎಂಬಿಬಿಎಸ್ ಪೂರೈಸಿದವರಿಗೆ ಗ್ರಾಮೀಣ ಸೇವೆ ಕಡ್ಡಾಯ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಸರ್ಕಾರಿ ಕೋಟಾದಡಿ ಸರ್ಕಾರಿ ಅಥವಾ ಖಾಸಗಿ ಕಾಲೇಜುಗಳಲ್ಲಿ ಪ್ರವೇಶ ಪಡೆದ (2022 ಜುಲೈ 22ಕ್ಕೆ ಅನ್ವಯವಾಗುವಂತೆ) ಎಂಬಿಬಿಎಸ್ ವಿದ್ಯಾರ್ಥಿಗಳು ಪದವಿಯ ಬಳಿಕ ಕಡ್ಡಾಯ ಗ್ರಾಮೀಣ ಸೇವೆ ಅಥವಾ ಬಾಂಡ್‌ಗಳ ಅನುಷ್ಠಾನದ ಕಠಿಣ ಷರತ್ತಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಂಗಳವಾರ ಮಹತ್ವದ ತೀರ್ಪು ನೀಡಿದೆ.

ಬೆಂಗಳೂರಿನ ಡಾ. ಶರಣ್ಯಾ ಮೋಹನ್ ಸೇರಿದಂತೆ ರಾಜಸ್ಥಾನ, ಹರಿಯಾಣ, ಕೇರಳ, ಗುಜರಾತ್, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಚೆನ್ನೈನ ವಿವಿಧ ಭಾಗಗಳ ಒಟ್ಟು 447 ವೈದ್ಯರು ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ನ್ಯಾಯಮೂರ್ತಿ ಎಂ ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಿಲೇವಾರಿ ಮಾಡಿದೆ.

"ಜಗತ್ತಿನ ಯಾವುದೇ ಭಾಗದಲ್ಲಿ ಕಡ್ಡಾಯವಾಗಿ ಗ್ರಾಮೀಣ ಸೇವೆ ಮಾಡುವುದು ವೈದ್ಯಕೀಯ ವೃತ್ತಿಯಲ್ಲಿ ಹೊಸದೇನಲ್ಲ. ಹೆಸರು ಬದಲಾಗಬಹುದು, ವಿಚಾರ ಒಂದೇ. ವೈದ್ಯರು ಸಮುದಾಯ/ಗ್ರಾಮೀಣ ಸೇವೆ ಮಾಡುವುದಕ್ಕೆ ಸಂಬಂಧಿಸಿದಂತೆ ವಿಶ್ವ ಆರೋಗ್ಯ ಸಂಸ್ಥೆಯು ಒಪ್ಪಂದಕ್ಕೆ ಸಹಿ ಹಾಕಿರುವ ದೇಶಗಳಿಗೆ ಹಲವು ಶಿಫಾರಸ್ಸುಗಳನ್ನು ಮಾಡಿದೆ" ಎಂದು ನ್ಯಾಯಾಲಯ ತಿಳಿಸಿದೆ.

"ವೈದ್ಯರನ್ನು ತಲುಪಲು ಸಾಧ್ಯವಾಗದ ಸ್ಥಳಗಳಲ್ಲಿ ವಾಸಿಸುವ ಆದಿವಾಸಿಗಳು, ಬಡವರಿಗೆ ಉತ್ತಮ ಆರೋಗ್ಯ ಸೇವೆ ಕಲ್ಪಿಸುವ ಉದ್ದೇಶದಿಂದ ಗ್ರಾಮೀಣ ಸೇವೆ ಕಡ್ಡಾಯಗೊಳಿಸಲಾಗಿದೆ. ವಿದ್ಯಾರ್ಥಿಗಳು ಸಾರ್ವಜನಿಕ ಆರೋಗ್ಯ ಯೋಜನೆಯ ಭಾಗವಾಗ ಬೇಕು. ವೈದ್ಯಕೀಯ ಪದವೀಧರರು ಸ್ವಯಂಪ್ರೇರಿತವಾಗಿ ಗ್ರಾಮೀಣ ಪ್ರದೇಶದಲ್ಲಿ ಸೇವೆ ನೀಡಲು ತಮ್ಮನ್ನು ತೊಡಗಿಸಕೊಳ್ಳುತ್ತಾರೆ ಎಂಬ ಕನಸು ಒಂದು ದಿನ ಸಾಕಾರವಾಗಬಹುದು. ಈ ಕನಸು ಆದಷ್ಟು ಬೇಗ ಸಾಕಾರಗೊಳ್ಳುವ ಮೂಲಕ ಸಮಸಮಾಜ ನಿರ್ಮಾಣವಾಗಬೇಕು" ಎಂದು ನ್ಯಾಯಾಲಯ ಹೇಳಿದೆ.

"2012ರ ಜುಲೈ 17ರ ಅಧಿಸೂಚನೆಯಲ್ಲಿ ತಿದ್ದುಪಡಿ ನಿಯಮಗಳು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದಾಗಿನಿಂದ ಜಾರಿಗೆ ಬರಲಿವೆ ಎಂದು ಹೇಳಲಾಗಿದೆ. ನಿಯಮಗಳು ರೂಪಿಸಿದ ಹತ್ತು ವರ್ಷಗಳ ಬಳಿಕ ಅಂದರೆ 2022ರ ಜುಲೈ 22ರಂದು ಗೆಜೆಟ್‌ನ

ಕಪ್ಪತಗುಡ್ಡದಲ್ಲಿ ನೆಡಲು, ರೈತರಿಗೆ ವಿತರಿಸಲು ಕಕ್ಕೂರ ನರ್ಸರಿಯಲ್ಲಿ 1.55 ಲಕ್ಷ ಸಸಿಗಳು ಸಿದ್ಧ

ಹಸಿರು ಬಿತ್ತಲು ಅರಣ್ಯ ಇಲಾಖೆ ಸಿದ್ಧ

■ ವಿಜಯಸಾಕ್ಷಿ ಸುದ್ದಿ, ಡಂಬಳ

ಶುದ್ಧ ಹಬೆಯ ತಾಣ, ಔಷಧೀಯ ಸಸ್ಯಗಳ ತವರೂರು ಕಪ್ಪತ್ತಗುಡ್ಡದಲ್ಲಿ ಸಸ್ಯಗಳನ್ನು ನೆಡಲು ಮತ್ತು ಗದಗ ಜಿಲ್ಲೆಯನ್ನು ಆಮ್ಲಜನಕದ ಬುಗ್ಗೆಯಾಗಿಸಲು ಜಿಲ್ಲಾ ಅರಣ್ಯ ಅಧಿಕಾರಿಗಳು ಮತ್ತು ಮುಂಡರಗಿ ವಿಭಾಗದ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಸಿದ್ಧರಾಗಿದ್ದಾರೆ. ಈ ಬಾರಿ ಕಕ್ಕೂರ ನರ್ಸರಿಯಲ್ಲಿ 1 ಲಕ್ಷ ಗಿಡಗಳನ್ನು ಕಪ್ಪತ್ತಗುಡ್ಡದಲ್ಲಿ ನೆಡುವ ಹಾಗೂ 55 ಸಾವಿರ ಗಿಡಗಳನ್ನು ರೈತರಿಗೆ ವಿತರಿಸಲು ಮುಂದಾಗಿದ್ದು, ಪರಿಸರ ಉಳಿಸಿ ಬೆಳೆಸಲು ಸನ್ನದ್ಧರಾಗಿದ್ದಾರೆ.

ವಿತರಣೆಗೆ ಸಸಿಗಳನ್ನು ಸಿದ್ಧಪಡಿಸಲು ಇಲಾಖೆ ತಿಂಗಳುಗಟ್ಟಲೆ ಶ್ರಮಿಸುತ್ತದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ವತಃ ಕಾಳಜಿ ವಹಿಸಿ, ಮೊದಲು ಗೊಬ್ಬರ, ಮರಳು ಮತ್ತು ಕೆಂಪು ಮಣ್ಣನ್ನು ಸಂಯೋಜಿಸಿ, ಸಸ್ಯಗಳ ಬೆಳವಣಿಗೆಗೆ ಪೂರಕ ಮಾಧ್ಯಮವನ್ನು ತಯಾರಿಸುತ್ತಾರೆ. ಈ ಪ್ರಕ್ರಿಯೆ ಒಂದು ವರ್ಷ ಸಮಯ ತೆಗೆದುಕೊಳ್ಳುತ್ತದೆ. ಬೀಜಗಳನ್ನು ಸಾಮಾನ್ಯವಾಗಿ ಜನೇವರಿ ಮತ್ತು ಮಾರ್ಚ್ ನಡುವೆ 4*6 ಇಂಚಿನ ಚೀಲಗಳಲ್ಲಿ ನೆಡಲಾಗುತ್ತದೆ. ಅವು ಮೊಳಕೆಯೊಡೆದ ನಂತರ ಸಾಮಾನ್ಯವಾಗಿ ಜೂನ್‌ನಲ್ಲಿ ಅವುಗಳನ್ನು ದೊಡ್ಡ ಚೀಲಗಳಿಗೆ ಸ್ಥಳಾಂತರಿಸಲಾಗುತ್ತದೆ. ಒಂದು ವರ್ಷದ ನಂತರ ಸಸಿಗಳು ನಾಟಿ ಮಾಡಲು ಸಿದ್ಧವಾಗಿರುತ್ತವೆ.

ರೈತರಿಗೆ ವಿತರಿಸುವ ಉದ್ದೇಶದಿಂದ 55 ಸಾವಿರ ಸಸಿಗಳನ್ನು ಸಿದ್ಧಪಡಿಸಲಾಗಿದ್ದು, ಸಾಗವಾನಿ, ಮಹಾಗನಿ, ಸೀತಾಫಲ, ಕರಿಬೇವು,

ನುಗ್ಗೆ, ಲಿಂಬೆ, ಬಿದಿರು, ನೇರಳೆ, ನೆಲ್ಲೆ, ಮಾವು ಸಸಿಗಳನ್ನು ಒಳಗೊಂಡಿವೆ. 6*9 ಚೀಲದಲ್ಲಿ ಬೆಳೆಸಿದ ಒಂದು ಸಸಿಗೆ 3 ರೂ, 8*12 ಚೀಲದಲ್ಲಿ ಬೆಳೆಸಿದ ಒಂದು ಸಸಿಗೆ 6 ರೂ ಅರಣ್ಯ ಇಲಾಖೆಗೆ ಭರಿಸುವುದರ ಮೂಲಕ ಸಸಿಗಳನ್ನು ಪಡೆದುಕೊಳ್ಳಬೇಕಾಗುತ್ತದೆ.

ಕಪ್ಪತ್ತಗುಡ್ಡ, ಶಾಲೆ, ಸರಕಾರಿ ಜಾಗೆಗಳಲ್ಲಿ ಅರಳಿ, ಆಲ, ಹತ್ತಿ, ಇಲಾಚಿ, ನೆರಳೆ, ಹೊಂಗೆ, ತಪಸ್ಸಿ, ಬಿಳಿಮತ್ತಿ, ಕಮರ, ಸೋನಾಡಾ, ಬೇವು, ಸೀತಾಫಲ, ಶಿವನಿ, ಭಾಗ್ಯ ಅಲ್ಲದೆ, ತಬೆಬುಯಾ, ಅರ್ಜೆಂಟೀಯಾ, ಭಾರತೀಯ ಕಹಳೆ ಮರ, ಚಂಪಕ್ ಸಸಿಗಳೂ ಸೇರಿದಂತೆ ವಿವಿಧ ಜಾತಿಯ 1 ಲಕ್ಷ ಸಸಿಗಳು ಸಿದ್ಧವಾಗಿವೆ.

ಸರಳವಾಗಿ ಸಸಿ ನೆಡುವುದು ಪ್ರಯೋಜನಕಾರಿಯಲ್ಲ. ಮಳೆ, ಗಾಳಿ, ಮೇಯಿಸುವ ದನಕರುಗಳಿಂದ ಅಪಾಯಕ್ಕೆ ಒಳಗಾಗುತ್ತವೆ. ಹಿರಿಯ ಅರಣ್ಯ ಅಧಿಕಾರಿಗಳ ಸಲಹೆ-ಸೂಚನೆಯ ಮೇರೆಗೆ ಸಸಿಗಳನ್ನು ನಮ್ಮ ನರ್ಸರಿಯಲ್ಲಿ ಬೆಳೆಸುವ ಮೂಲಕ ಅವು ಒಂದು ನಿರ್ದಿಷ್ಟ ಎತ್ತರಕ್ಕೆ ಬೆಳೆದು ನಿಲ್ಲುವವರೆಗೆ ನಾವು ಅವುಗಳನ್ನು ನೋಡಿಕೊಳತ್ತೇವೆ. ನಂತರವಷ್ಟೇ ಅವುಗಳನ್ನು ತಮ್ಮ ಜಮೀನುಗಳಲ್ಲಿ ನೆಡಲು ಮುಂದಾಗಬೇಕು ಎಂದು ಹೇಳುತ್ತಾರೆ ಮುಂಡರಗಿ ವಲಯ ಅರಣ್ಯ ಅಧಿಕಾರಿ ವೀರೇಂದ್ರ ಮರಿಬಸಣ್ಣವರ.

ಪ್ರಸ್ತುತ ದಿನಗಳಲ್ಲಿ ನಗರವಷ್ಟೇ ಅಲ್ಲದೆ ಗ್ರಾಮೀಣ ಭಾಗಗಳಲ್ಲಿಯೂ ಅತಿಯಾದ ಮಾಲಿನ್ಯದಿಂದ ವಾತಾವರಣದ ತಾಪಮಾನ

> ಪರಿಸರ ಸಮತೋಲನ, ತಾಪಮಾನ ನಿಯಂತ್ರಿಸಲು, ಕಾಲ ಕಾಲಕ್ಕೆ ಮಳೆಯಾಗಲು ಆಮ್ಲಜನಕ ನೀಡುವ ಏಕೈಕ ಫ್ಯಾಕ್ಟರಿ ಗಿಡಗಳು. ಅವುಗಳ ಉಳಿವಿಗಾಗಿ ಪ್ರತಿಯೊಬ್ಬರೂ ಪಣ ತೊಡಬೇಕಿದೆ. ಈ ದಿಸೆಯಲ್ಲಿ ನಮ್ಮೆಲ್ಲರ ಕರ್ತವ್ಯ ಎಂದರೆ ಹೆಚ್ಚು ಹೆಚ್ಚು ಗಿಡಗಳನ್ನು ನೆಡುವುದು, ಪರಿಸರವನ್ನು ವೃದ್ಧಿಸುವುದು, ಪರಿಸರ ಉಳಿಸುವುದು.
>
> – ವೀರೇಂದ್ರ ಮರಿಬಸಣ್ಣವರ.
> ವಲಯ ಅರಣ್ಯ ಅಧಿಕಾರಿ-ಮುಂಡರಗಿ.

ಹೆಚ್ಚುತ್ತಾ ಹೋಗುತ್ತಿದೆ. ಇದರ ತಡೆಗೆ ಪ್ರತಿಯೊಬ್ಬರು ಮುಂದಾಗಬೇಕಾಗಿದೆ. ಇಲ್ಲವಾದರೆ ಗಿಡಗಳ ಪ್ರಮಾಣ ಕಡಿಮೆಯಾದಂತೆ ಆಮ್ಲಜನಕದ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಇದರಿಂದ ವಾತಾವರಣದಲ್ಲಿ ಪ್ರತಿಕೂಲ ಪರಿಣಾಮ ಬೀರುವುದರ ಮೂಲಕ ವಾಯುಮಾಲಿನ್ಯ, ಮಳೆ ಪ್ರಮಾಣ ಕಡಿಮೆಯಾಗಿ ಬರಗಾಲ, ಶುದ್ಧ ನೀರಿಗಾಗಿ ಪರದಾಟ ಉಂಟಾಗುತ್ತದೆ. ಅಷ್ಟೇ ಅಲ್ಲದೆ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ ಇದ್ದು, ಪ್ರತಿಯೊಬ್ಬರೂ ಎಚ್ಚೆತ್ತು ಹೆಚ್ಚು ಹೆಚ್ಚು ಸಸಿಗಳನ್ನು ನೆಟ್ಟು ಪರಿಸರದ ಕಾಳಜಿಯನ್ನು ತೋರಿಸಲು ಸನ್ನದ್ಧವಾಗಬೇಕಾಗಿದೆ. ಸಸಿಗಳನ್ನು ಪಡೆದುಕೊಳ್ಳಲು ಅರಣ್ಯಾಧಿಕಾರಿಗಳಾದ ಸಂತೋಷ ಕಗದಾಳ (8762073359), ಕುಮಾರ ಪೂಜಾರ (8277503451) ಇವರನ್ನು ಸಂಪರ್ಕಿಸಬಹುದಾಗಿದೆ.

ಸಮಾಜದ ಸ್ವಾಸ್ಥ್ಯ ಕೆಡಿಸುವವರಿಗೆ ಸರಕಾರ ಲಗಾಮು ಹಾಕಲಿ

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ದಾವಣಗೆರೆಯ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ನಡೆದಿದೆಯೆನ್ನಲಾದ ಆದಿಲ್‌ರ ಲಾಕಪ್ ಡೆತ್ ಪ್ರಕರಣದ ಸಮಗ್ರ ತನಿಖೆ ನಡೆಸಿ ವಾಸ್ತವಾಂಶಗಳನ್ನು ಸರಕಾರ ಜನರ ಮುಂದಿಡಬೇಕಾಗಿದೆ. ಆದರೆ ಈ ಪ್ರಕರಣವನ್ನು ಸಂಘ ಪರಿವಾರ ಶಕ್ತಿಗಳು ಕೋಮು ಬಣ್ಣ ಲೇಪಿಸಿ ಸಮಾಜದ ಸ್ವಾಸ್ಥ್ಯ ಕೆಡಿಸುವ ಪ್ರಯತ್ನ ಮಾಡುತ್ತಿದ್ದು, ಇದನ್ನು ಸರಕಾರ ಕೂಡಲೇ ನಿಲ್ಲಿಸಬೇಕು ಎಂದು ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ರಾಜ್ಯ ಅಧ್ಯಕ್ಷ ಅಡ್ವಕೇಟ್ ತಾಹೇರ್ ಹುಸೇನ್ ಅಭಿಪ್ರಾಯಪಟ್ಟಿದ್ದಾರೆ.

ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಕರಣವನ್ನು ತನ್ನ ದ್ವೇಷದ ಅಜೆಂಡಾ ನಡೆಸಲು ಬಳಸುತ್ತಿರುವ ಕೋಮು ಶಕ್ತಿಗಳು ಒಂದು ಸಮುದಾಯದ ಮೇಲೆ ಇಲ್ಲ ಸಲ್ಲದ ಆರೋಪ ಮಾಡಿ ಜನರನ್ನು ಮತ್ತಷ್ಟು ಕೆರಳಿಸಿ ಸಮಾಜದಲ್ಲಿ ಅಶಾಂತಿ ಹರಡಿಸುವ ಕೆಲಸ ಮಾಡುತ್ತಿವೆ.

ಯಾರೇ ಆಗಲಿ, ನೈಜ ಅರೋಪಿಗಳ ಬಂಧನವಾಗಲಿ. ಮುಸ್ಲಿಂ ಬಾಹುಳ್ಯ ಪ್ರದೇಶವನ್ನು ಹೆಸರಿಸಿ ಇಡೀ ಸಮಾಜದ ಮೇಲೆ ಸುಳ್ಳು ಆರೋಪ ಹೊರಿಸುವ ಮೂಲಕ ಕೋಮು ದ್ವೇಷದತ್ತ ಪ್ರಕರಣವನ್ನು ಹೊರಳಿಸಲು ಪ್ರಯತ್ನಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರ ಮುಂದಾಗಬೇಕು ಎಂದಿದ್ದಾರೆ.

ಬಿಜೆಪಿ ಅಭ್ಯರ್ಥಿಯ ಬೆಂಗಾವಲು ವಾಹನ ಡಿಕ್ಕಿ: ಇಬ್ಬರು ಸಾವು

■ ವಿಜಯಸಾಕ್ಷಿ ಸುದ್ದಿ, ಗೊಂಡಾ

ಕುಸ್ತಿಪಟುಗಳಿಗೆ ಲೈಂಗಿಕ ದೌರ್ಜನ್ಯ ಪ್ರಕರಣದ ಆರೋಪಿ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರ ಪುತ್ರ ಕೈಸರ್‌ಗಂಜ್ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕರಣ್ ಭೂಷಣ್ ಸಿಂಗ್ ಅವರ ಬೆಂಗಾವಲು ವಾಹನ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ ಇಬ್ಬರು ಸಾವನ್ನಪ್ಪಿರುವ ಘಟನೆ ಉತ್ತರ ಪ್ರದೇಶದ ಗೊಂಡಾ ಎಂಬಲ್ಲಿ ನಡೆದಿದೆ.

ಗೊಂಡಾದ ಕರ್ನಲ್‌ಗಂಜ್-ಹುಜೂರ್‌ಪುರ ರಸ್ತೆಯಲ್ಲಿರುವ ಬೈಕುಂಠ್ ಪದವಿ ಕಾಲೇಜು ಬಳಿ ಈ ಅಪಘಾತ ಸಂಭವಿಸಿದ್ದು, ವೇಗವಾಗಿ ಬಂದ ಫಾರ್ಚೂನರ್ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ ಇಬ್ಬರು ಸಾವನ್ನಪ್ಪಿದ್ದಾರೆ.

ತನ್ನ ಮಗ 17 ವರ್ಷದ ಮಗ ರೆಹಾನ್ ಮತ್ತು 24 ವರ್ಷದ ಸೋದರಳಿಯ ಶಹಜಾದೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಎದುರುಗಡೆಯಿಂದ ಬಂದ ಎಸ್‌ಯುವಿ ಢಿಕ್ಕಿ ಹೊಡೆದಿದೆ. ತಕ್ಷಣ ಇಬ್ಬರನ್ನು ಆಸ್ಪತ್ರೆಗೆ ಸಾಗಿಸಿದರೂ ಅವರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ ಎಂದು ದೂರುದಾರರಾದ ಚಂದಾ ಬೇಗಂ ಅವರು ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ.

ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಚಾಲಕನನ್ನು ಬಂಧಿಸಿದ್ದಾರೆ. ಕರಣ್ ಭೂಷಣ್ ಸಿಂಗ್ ಬೆಂಗಾವಲು ವಾಹನದ ಜೊತೆ ಪ್ರಯಾಣಿಸುತ್ತಿದ್ದರೆ ಎಂಬ ಬಗ್ಗೆ ಇನ್ನೂ ಯಾವುದೇ ದೃಢೀಕರಣವಿಲ್ಲ ಎಂದು ಪೊಲೀಸರು ಹೇಳಿಕೊಂಡಿದ್ದಾರೆ.

ಕರಣ್ ಭೂಷಣ್ ಸಿಂಗ್ ಕೈಸರ್ ಗಂಜ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ. ಬ್ರಿಜ್ ಭೂಷಣ್ ಶರಣ್ ಸಿಂಗ್ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಕ್ಕಾಗಿ ಕ್ರಿಮಿನಲ್ ಆರೋಪಗಳನ್ನು ಎದುರಿಸುತ್ತಿರುವ ಕಾರಣ ಅವರ ಪುತ್ರನಿಗೆ ಈ ಬಾರಿ ಟಿಕೆಟ್ ನೀಡಲಾಗಿದೆ. ಬ್ರಿಜ್ ಭೂಷಣ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪವಿದ್ದರೂ ಆತನ ಕುಟುಂಬಕ್ಕೆ ಟಿಕೆಟ್ ನೀಡಿರುವುದು ವ್ಯಾಪಕ ಟೀಕೆಗೆ ಕಾರಣವಾಗಿತ್ತು. ಕುಸ್ತಿ ಪಟುಗಳಾದ ಸಾಕ್ಷಿ ಮಲಿಕ್, ಭಜರಂಗ್ ಪುನಿಯಾ ಈ ಬಗ್ಗೆ ಸಾರ್ವಜನಿಕ ಹೇಳಿಕೆಯನ್ನು ಕೂಡ ನೀಡಿದ್ದರು.

ಘಟನೆಯ ಬೆನ್ನಲ್ಲೇ ಸ್ಥಳದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು, ಪೊಲೀಸರು ಅಪಘಾತವೆಸಗಿದ ಕಾರನ್ನು ವಶಪಡಿಸಿಕೊಂಡಿದ್ದಾರೆ. ಈ ಕುರಿತು ಕರ್ನಲ್ ಗಂಜ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯ ಸರ್ಕಾರದಿಂದ ದಲಿತರಿಗೆ ಅನ್ಯಾಯ

■ ವಿಜಯಸಾಕ್ಷಿ ಸುದ್ದಿ, ಗದಗ

ದಲಿತರ ಅಭಿವೃದ್ಧಿಗಾಗಿ ಮೀಸಲಿರುವ ಹಣ ಕಬಳಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆ ಖಂಡನೀಯವೆಂದು ಎಸ್ಸಿ-ಎಸ್ಟಿ ದೌರ್ಜನ್ಯ ನಿಯಂತ್ರಣ ಕಾಯ್ದೆ 1989ರ ಗದಗ ಜಿಲ್ಲಾ ಜಾಗೃತ ಹಾಗೂ ಉಸ್ತುವಾರಿ ಸಮಿತಿ ಸದಸ್ಯ ಸುರೇಶ ವಾಯ್. ಚಲವಾದಿ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯ ಸರ್ಕಾರ ಪರಿಶಿಷ್ಟ ಪಂಗಡದ ಅಭಿವೃದ್ಧಿಗಾಗಿ ಮೀಸಲಿರುವ 187 ಕೋಟಿ ರೂ ಅನುದಾನವನ್ನು ಅನ್ಯ ಉದ್ದೇಶಕ್ಕಾಗಿ ಬಳಸಿ ಪರಿಶಿಷ್ಟ ಪಂಗಡದ ಸಮುದಾಯದ ಜನಗಳಿಗೆ ವಂಚಿಸಿದೆ. ಇಂತಹ ಅಕ್ರಮಗಳು ನಡೆಯುತ್ತಿರುವದರಿಂದ ನಿಷ್ಠಾವಂತ ಅಧಿಕಾರಿಗಳು ಪ್ರಾಣವನ್ನು ಕಳೆದುಕೊಳ್ಳುತ್ತಿರುವದು ವಿಪರ್ಯಾಸದ ಸಂಗತಿ.

ದಲಿತರ ಹೆಸರಿನಲ್ಲಿ ಮತ ಪಡೆದ ಕಾಂಗ್ರೆಸ್ ದಲಿತರ ಹೆಸರೇಳಿಕೊಂಡು ಅಧಿಕಾರದ ಗದ್ದುಗೆ ಏರಿ ಈಗ ಸರ್ಕಾರ ದಲಿತರಿಗೆ ಒಂದಲ್ಲ ಒಂದು ರೀತಿಯಲ್ಲಿ ವಂಚಿಸುತ್ತಿರುವದು ದೌರ್ಭಾಗ್ಯವೇ ಸರಿ.

ದಲಿತರನ್ನು ಕೇವಲ ಮತಬ್ಯಾಂಕ್‌ಗಳನ್ನಾಗಿ ಬಳಸಿಕೊಂಡ ಕಾಂಗ್ರೆಸ್ ದಲಿತರ ಅಭಿವೃದ್ಧಿಯ ವಿಷಯದಲ್ಲಿ ಶೂನ್ಯ ಸಾಧನೆ ಸಾಧಿಸಿದೆ. ಕೇವಲ ದಾಖಲೆಗಳಲ್ಲಿ ಮಾತ್ರ ಕೋಟಿಗಟ್ಟಲೇ ಅನುದಾನವಿರಬಾರದು. ಅವು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಬೇಕು. ಅಂದಾಗ ಮಾತ್ರ ಕಾಂಗ್ರೆಸ್‌ನವರ ಭಾಷಣದ ಸಾಮಾಜಿಕ ನ್ಯಾಯಕ್ಕೆ ಅರ್ಥ ಬರತ್ತದೆ ಎಂದು ವ್ಯಂಗ್ಯವಾಡಿದ್ದಾರೆ.

ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ ಇಲಾಖೆಯಿಂದ ವಿವಿಧ ಕಾರ್ಯಕ್ರಮಗಳಡಿ ಹೆಚ್ಚುವರಿ ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆದುಕೊಳ್ಳಲು ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ ರೈತರಿಂದ ಅರ್ಜಿ ಆಹ್ವಾನಿಸಲಾಗಿದೆ.

ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ 2024-25 ಸಾಲಿನಲ್ಲಿ ಗ್ರಾಮ ಪಂಚಾಯತಿಗಳಿಂದ ತಯಾರಿಸಿದ ಕ್ರಿಯಾಯೋಜನೆಯಲ್ಲಿ ಈಗಾಗಲೇ ಅನುಮೋದನೆಗೊಂಡ ರೈತರು ಇಲಾಖೆಯನ್ನು ಸಂಪರ್ಕಿಸಿ ಅರ್ಜಿ ಸಲ್ಲಿಸಿ ಕಾಮಗಾರಿಗಳನ್ನು ಪ್ರಾರಂಭಿಸಬೇಕು. ಕ್ರೀಯಾಯೋಜನೆಯಲ್ಲಿ ಅನುಮೋದನೆಯಾಗದ ಬೇಡಿಕೆ ಮತ್ತು ಆಸಕ್ತ ರೈತರು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ಮಾವು, ಬಾಳೆ, ಚಿಕ್ಕು, ಪೇರಲ, ಲಿಂಬೆ, ಡ್ರಾಗನ್ ಫ್ರೂಟ್, ನುಗ್ಗಿ ಮುಂತಾದ ಬೆಳೆಗಳನ್ನು ಬೆಳೆಯಬಹುದಾಗಿದೆ.

ಆಸಕ್ತ ರೈತರು ಜೂನ್ 15 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಸುರೇಶ ಕುಂಬಾರ ತಿಳಿಸಿದ್ದಾರೆ.

ನಿಧನ ವಾರ್ತೆ

ದೇವಕ್ಕ ಕೋಂ ಮರಿಯಪ್ಪ ಹುಬ್ಬಳ್ಳಿ

ಗದಗ: ಹುಲಕೋಟಿಯ ಕುರುಬ ಸಮಾಜದ ಹಿರಿಯರಾದ ಶ್ರೀಮತಿ ದೇವಕ್ಕ ಕೋಂ ಮರಿಯಪ್ಪ ಹುಬ್ಬಳ್ಳಿ ಇವರು ತಮ್ಮ 72ನೇ ವಯಸ್ಸಿನಲ್ಲಿ ಬುಧವಾರ ಮಧ್ಯಾಹ್ನ 12.30ಕ್ಕೆ ನಿಧನರಾದರು. ಮೃತರ ಅಂತ್ಯಕ್ರಿಯೆಯು ಅದೇ ದಿನ ಸಂಜೆ 6 ಗಂಟೆಗೆ ಹುಲಕೋಟಿ ಗ್ರಾಮದ ಮುಕ್ತಿವನದಲ್ಲಿ ಜರುಗಿತು.

ಮೃತರು ಇಬ್ಬರು ಪುತ್ರಿಯರು, ಮೂವರು ಸಹೋದರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಸಂತಾಪ: ದೇವಕ್ಕ ಮರಿಯಪ್ಪ ಹುಬ್ಬಳ್ಳಿ ಇವರ ನಿಧನಕ್ಕೆ ಸಚಿವ ಎಚ್.ಕೆ. ಪಾಟೀಲ, ಗದಗ ಮತಕ್ಷೇತ್ರದ ಮಾಜಿ ಶಾಸಕ ಡಿ.ಆರ್. ಪಾಟೀಲ ಹಾಗೂ ಗ್ರಾಮದ ಹಿರಿಯರು ಸಂತಾಪ ಸೂಚಿಸಿದ್ದಾರೆ.

ತಾಲೂಕು ಮಟ್ಟದ ಅಡ್ವೋಕೆಸಿ ಕಾರ್ಯಾಗಾರದಲ್ಲಿ ಡಾ.ಲಕ್ಷ್ಮಣ ಪೂಜಾರ

ಡೆಂಗ್ಯೂ ಜ್ವರದ ಅರಿವು ಮೂಡಿಸಿ

■ ವಿಜಯಸಾಕ್ಷಿ ಸುದ್ದಿ, ಗದಗ

ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಂಡು ಡೆಂಗ್ಯೂ ಜ್ವರವನ್ನು ನಿಯಂತ್ರಿಸೋಣ ಎಂದು ತಾಲೂಕಾ ಆರೋಗ್ಯಾಧಿಕಾರಿ ಡಾ.ಲಕ್ಷ್ಮಣ ಪೂಜಾರ ಹೇಳಿದರು

ಮಂಗಳವಾರ ಮುಂಡರಗಿ ತಾಲೂಕು ಪಂಚಾಯಿತಿಯಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಗದಗ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಇಲಾಖೆ, ತಾಲೂಕು ಆಡಳಿತ, ತಾಲೂಕ ಪಂಚಾಯಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ತಾಲೂಕಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಡೆಂಗ್ಯೂ ದಿನಾಚಾರಣೆ ಅಂಗವಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಏರ್ಪಡಿಸಿದ್ದ ಅಡ್ವೋಕೆಸಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಡೆಂಗ್ಯೂ ಜ್ವರದ ವಿಧಗಳಾದ ಡೆಂಗ್ಯೂ ಜ್ವರ, ಡೆಂಗ್ಯೂ ರಕ್ತಸ್ರಾವ, ಡೆಂಗ್ಯೂ ಶಾಕ್ ಸಿಂಡ್ರೋಮ್

ರೋಗಕ್ಕೆ ರೋಗದ ಲಕ್ಷಣಗಳ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುವುದು. ಈ ಬಗ್ಗೆ ಜನರಿಗೆ ಹೆಚ್ಚಿನ ಅರಿವನ್ನು ಮೂಡಿಸಬೇಕು ಎಂದರು.

ರೋಗ ಬರದ ಹಾಗೆ ಮುನ್ನೆಚರಿಕೆಯಾಗಿ ಮನೆಯ ಸುತ್ತ ಮುತ್ತ ನೀರು ನಿಲ್ಲದ ಹಾಗೆ ಸ್ವಚ್ಛವಾಗಿ ಇಡಬೇಕು ಮತ್ತು ಮನೆಯ ಒಳಗೆ ನೀರು ತುಂಬುವ ಪಾತ್ರೆಗಳನ್ನು ವಾರಕ್ಕೊಮ್ಮೆ ಸ್ವಚ್ಛವಾಗಿ ತೊಳೆದು ಒಣಗಿಸಿ ನೀರು ತುಂಬಿ ಮೇಲೆ ಮುಚ್ಚಬೇಕು. ಮನೆಯ ಕಿಟಕಿಗಳಿಗೆ ಜಾಲರಿಗಳನ್ನು ಬಳಸಬೇಕು ಮತ್ತು ಮಲಗುವಾಗ ಸೊಳ್ಳೆ ಪರದೆಗಳನ್ನು ಬಳಸಬೇಕು. ಸಾಯಂಕಾಲ ಬೇವಿನ ಸೊಪ್ಪಿನ ಹೊಗೆಯನ್ನು ಹಾಕಬೇಕು. ರಾಸಾಯನಿಕ ವಿಧಾನ ಧೂಮೀಕರಣ ಮಾಡುವುದು, ಜೈವಿಕ ನಿಯಂತ್ರಣ ಲಾರ್ವಾ ಹಾರಿ ಮೀನುಗಳನ್ನು ಸಾಕಾಣೆ ಮಾ

ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರ ಬಳಸಿ

ರೈತರ ಬಾಂಧವರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪ್ರಧಾನ ಪೋಷಕಾಂಶಗಳು ಮತ್ತು ಲಘು ಪೋಷಕಾಂಶಗಳಿಗೆ ಭೂಮಿಯೇ ಮುಖ್ಯ ಆಧಾರ, ಮಣ್ಣಿನಿಂದ ಈ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ದೊರೆಯುವುದಿಲ್ಲ. ಹಾಗಾಗಿ ಬಾಹ್ಯವಾಗಿ ನೀಡುವುದು ಅನಿವಾರ್ಯ. ಬೆಳೆಗಳಿಗೆ ಬೇಕಾಗುವ ಈ ಬಾಹ್ಯ ಪೋಷಕಾಂಶಗಳನ್ನು ಸಾವಯುವ (ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿ ಇತ್ಯಾದಿ) ಮತ್ತು ರಸಗೊಬ್ಬರಗಳಿಂದ ಒದಗಿಸಬೇಕಾಗಿದ್ದು, ರಸಗೊಬ್ಬರಗಳಲ್ಲಿ ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಮತ್ತು ನೇರವಾಗಿ ದೊರೆಯುವ ರೂಪದಲ್ಲಿದ್ದು, ಅವುಗಳ ಬಳಕೆ ಅತ್ಯಗತ್ಯವಾಗಿರುತ್ತದೆ.

ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶ ಒದಗಿಸುವ ಯೂರಿಯಾ ಹಾಗೂ ಡಿ.ಎ.ಪಿ.ಯನ್ನು ರೂಢಿಗತವಾಗಿ ಬಳಸುತ್ತಿದ್ದು, ಇವುಗಳಲ್ಲಿ ಸಾರಜನಕ ಮತ್ತು ರಂಜಕದ ಅಂಶ ಮಾತ್ರವಿರುತ್ತದೆ. ಆದರೆ, ಬೆಳೆಗಳಿಗೆ ಬರ ಮತ್ತು ರೋಗ ನಿರೋಧಕ ಶಕ್ತಿ ನೀಡಿ ಕಾಳಿನ ತೂಕ ಹೆಚ್ಚಿಸಲು ಅತ್ಯಂತ ಅವಶ್ಯಕವಾಗಿರುವ ಪೊಟ್ಯಾಷ್ ಲಭ್ಯವಿರುವುದಿಲ್ಲ.

ಮಾರುಕಟ್ಟೆಯಲ್ಲಿ ವಿವಿಧ ಶ್ರೇಣಿಯ (ಗ್ರೇಡ್) ಸಾರಜನಕ, ರಂಜಕ ಮತ್ತು ಪೊಟ್ಯಾಷ್ ಯುಕ್ತ ಬಹಳಷ್ಟು ರಸಗೊಬ್ಬರಗಳು ಲಭ್ಯವಿದ್ದು, ಶಿಫಾರಸ್ಸಿನಂತೆ ವಿವಿಧ ರಸಗೊಬ್ಬರಗಳ ಸಂಯೋಜನೆಯೊಂದಿಗೆ ಬಳಸಬಹುದಾಗಿದೆ. ಶಿಫಾರಸ್ಸಿನಂತೆ ಬೆಳೆಗಳಿಗೆ ಸಾರಜನಕ : ರಂಜ-ಕ : ಪೋಟ್ಯಾಷ್ ರಸಗೊಬ್ಬರಗಳನ್ನು 4:2:1 ರ ಅನುಪಾತದಲ್ಲಿ ಬಳಸಬೇಕಾಗಿರುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ರೈತರು ಬಳಸುತ್ತಿರುವ ರಸಗೊಬ್ಬರಗಳ ಅನುಪಾತವು ರಾಜ್ಯದಲ್ಲಿ 5:3:1 ಆಗಿರುತ್ತದೆ. ಕಾರಣ ಸಮತೋಲನಾತ್ಮಕ ರಸಗೊಬ್ಬರಗಳ ಬಳಕೆಯನ್ನು ಉತ್ತೇಜಿಸಲು ಪೊಟ್ಯಾಷ್‌ಯುಕ್ತ ಸಂಯುಕ್ತ ರಸಗೊಬ್ಬರಗಳ ಬಳಕೆ ಮಾಡುವುದು ಮುಖ್ಯವಾಗಿರುತ್ತದೆ.

ರೈತರು ರಸಗೊಬ್ಬರವನ್ನು ಕೇವಲ ಒಂದೇ ಸಂಸ್ಥೆಯ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಪೊಟ್ಯಾಷ್ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳಾದ 15:15:15, 10:26:26, 12:32:16, 22:22:11, 14:35:14, 17:17:17, 14:28:14, 19:19:19, 20:10:10 ಇತ್ಯಾದಿ ರಸಗೊಬ್ಬರಗಳನ್ನೂ ಸಹ ಬಳಸಬಹುದಾಗಿದೆ.

ಜಿಲ್ಲೆಯ ಮಾರಾಟಗಾರರು ರಸಗೊಬ್ಬರಗಳನ್ನು ಮಾರಾಟ ಮಾಡುವಾಗ ಪೊಟ್ಯಾಷ್‌ಯುಕ್ತ ಸಂಯುಕ್ತ ರಸಗೊಬ್ಬರಗಳ ಉಪಯುಕ್ತತೆ ಬಗ್ಗೆ ರೈತರಿಗೆ ತಿಳಿಸಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತರಬೇತಿಗೆ ರೈತರಿಂದ ಹೆಸರು ನೋಂದಣಿ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಧಾರವಾಡ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಪ್ರಸಕ್ತ ಸಾಲಿನಲ್ಲಿ ರೈತರಿಗೆ ಕೃಷಿ ಸಾಂಸ್ಥಿಕ ತರಬೇತಿಗಳನ್ನು ಆಯೋಜಿಸಲಾಗಿದೆ.

ಕಾಲಕಾಲಕ್ಕೆ ಕೃಷಿಗೆ ಸಂಬಂಧಿಸಿದ ಮತ್ತು ಕೃಷಿ ಪೂರಕ ಉದ್ದಿಮೆಗಳ ಕುರಿತು ಹಂಗಾಮಿಗೆ ಅನುಗುಣವಾಗಿ ಸೂಕ್ತವಾದ ವಿಷಯಗಳ ಬಗ್ಗೆ, ನುರಿತ ವಿಷಯ ತಜ್ಞರಿಂದ ರೈತರಿಗೆ ತರಬೇತಿಗಳನ್ನು ಏರ್ಪಡಿಸಲಾಗುತ್ತಿದೆ.

ಆಸಕ್ತ ರೈತರು ದೂರವಾಣಿ ಸಂಖ್ಯೆ: 0836-2978374, 8277931316, 8277931382, 7204364175 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಸತಿ ಶಾಲೆಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಧಾರವಾಡ ತಾಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಸತಿ ಶಾಲೆ ಸೈದಾಪೂರ, ಇಲ್ಲಿನ ಖಾಲಿ ಇರುವ ಸ್ಥಾನಗಳಿಗೆ ಅನುಗುಣವಾಗಿ ಭರ್ತಿ ಮಾಡಲು 1ನೇ ತರಗತಿಯಿಂದ 5ನೇ ತರಗತಿವರೆಗಿನ ಅರ್ಹ ಪ.ಜಾತಿ, ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿ ಫಾರ್ಮ್‌ಗಳನ್ನು ಧಾರವಾಡ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಛೇರಿ ಅಥವಾ ಸರ್ಕಾರಿ ವಸತಿ ಶಾಲೆ ಸೈದಾಪೂರ ಧಾರವಾಡದಲ್ಲಿ ಉಚಿತವಾಗಿ ಪಡೆದುಕೊಳ್ಳಬಹುದು. ಪ್ರವೇಶ ಬಯಸುವ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ಭರ್ತಿ ಮಾಡಿ, ಸಂಬಂಧಿಸಿದ ದಾಖಲಾತಿಗಳೊಂದಿಗೆ ಧಾರವಾಡ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರ ಕಾರ್ಯಾಲಯಕ್ಕೆ ಜೂನ್ 15ರ ಸಂಜೆ 5.30ರೊಳಗಾಗಿ ಸಲ್ಲಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಪ್ರಜ್ವಲ್ ರೇವಣ್ಣ ಹೆಸರಿನಲ್ಲಿ ಬೆಂಗಳೂರಿಗೆ ಫ್ಲೈಟ್ ಟಿಕೆಟ್ ಬುಕ್

■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ಹಲವು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಎದುರಿಸುತ್ತಿರುವ, ಜೆಡಿಎಸ್‌ನಿಂದ ಅಮಾನತುಗೊಂಡಿರುವ ಸಂಸದ, ಎನ್‌ಡಿಎ ಎಂಪಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಹೆಸರಿನಲ್ಲಿ ಬವೇರಿಯಾದ ರಾಜಧಾನಿಮ್ಯೂನಿಚ್‌ನಿಂದ ಬೆಂಗಳೂರಿಗೆ ಹಿಂತಿರುಗಲು ವಿಮಾನ ಟಿಕೆಟ್ ಕಾಯ್ದಿರಿಸಲಾಗಿದೆ ಎನ್ನಲಾಗಿದೆ.

ವಿಶೇಷ ತನಿಖಾ ತಂಡದ ಮೂಲಗಳ ಪ್ರಕಾರ, ಜೆಡಿಎಸ್ ವರಿಷ್ಠ ಎಚ್ ಡಿ ದೇವೇಗೌಡರ 33 ವರ್ಷದ ಮೊಮ್ಮಗ ಮೇ 31ರ ಬೆಳಗಿನಜಾವ ಬೆಂಗಳೂರಿಗೆ ಬಂದಿಳಿಯುವ ನಿರೀಕ್ಷೆಯಿದೆ. ಬಂದಿಳಿದ ಕೂಡಲೇ ಆತನನ್ನು ಬಂಧಿಸಲು ಎಸ್‌ಐಟಿ ಇಲ್ಲಿನ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ನಿಗಾ ಇರಿಸಿದೆ.

ಹಾಸನ ಲೋಕಸಭೆ ಕ್ಷೇತ್ರದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಮರು ಆಯ್ಕೆ ಬಯಸಿರುವ ಸಂಸದ, ಅಪಾರ ಪ್ರಮಾಣದ ಅಶ್ಲೀಲ ವಿಡಿಯೊ ಸಂಗ್ರಹದ ಬಗ್ಗೆ ತನಿಖೆಗೆ ಆದೇಶಿಸುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದೆ ಎಂಬ ಸುದ್ದಿ ಹೊರಬಿದ್ದ ತಕ್ಷಣ ಪ್ರಜ್ವಲ್ ವಿದೇಶದಲ್ಲಿ ತಲೆಮರೆಸಿಕೊಂಡಿದ್ದಾರೆ ಎನ್ನಲಾಗಿದೆ. ಆತನಿಂದ ಆಪಾದಿತವಾಗಿ ಹಲವಾರು ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೊಳಗಾದುದನ್ನು ತೋರಿಸುವ ಸ್ಪಷ್ಟ ವೀಡಿಯೊಗಳು ಪೆನ್‌ಡ್ರೈವ್ ಮತ್ತು ಇಂಟರ್‌ನೆಟ್‌ನಲ್ಲಿ ವೈರಲ್ ಆಗಿವೆ.

ಗದಗ ತಾಲೂಕಾ ಕಸಾಪ ವತಿಯಿಂದ 'ಮನೆಯಂಗಳದಲ್ಲಿ ಸಾಹಿತ್ಯ' ಕಾರ್ಯಕ್ರಮ

ಕಬಾಡಿಯವರ ಹೆಸರು ಮುಖ್ಯವಾಹಿನಿಗೆ ಬರಲಿ

■ ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾತಂತ್ರ್ಯ ಹೋರಾಟಗಾರರಾದ ಲಕ್ಷ್ಮಣಸಾ ಕಬಾಡಿಯವರು ಭಾರತದ ಸ್ವಾತಂತ್ರ್ಯಕ್ಕೆ ನೀಡಿದ ಕೊಡುಗೆ ಸ್ಮರಣೀಯವಾಗಿದೆ. ಕಷ್ಟ, ನಷ್ಟ, ನೋವುಗಳನ್ನು ಲೆಕ್ಕಿಸದೆ ಅವರು ಮುನ್ಸಿಪಾಲಿಟಿಯ ಕಟ್ಟಡದ ಮೇಲೆ ಹತ್ತಿ, ಅಲ್ಲಿದ್ದ ಬ್ರಿಟಿಷರ ಧ್ವಜವನ್ನು ಕಿತ್ತು, ಭಾರತದ ಧ್ವಜವನ್ನು ನೆಟ್ಟು, ಜೈಹಿಂದ್ ಎಂದು ಸಿಂಹ ಘರ್ಜನೆ ಮಾಡಿದರು. ಅಂದಿನಿಂದ ಅವರ ಮನೆತನಕ್ಕೆ 'ಜೈಹಿಂದ್' ಎನ್ನುವ ಹೆಸರು ಅನ್ವರ್ಥಕವಾಯಿತು ಎಂದು ಮುಳಗುಂದದ ಕನ್ನಡ ಶಿಕ್ಷಕಿ ಸಾವಿತ್ರಿ ತಿಮ್ಮಾಪೂರ ಹೇಳಿದರು.

ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಬಸವೇಶ್ವರ ನಗರದ ಖ್ಯಾತ ಗಾಯಕಿ, ಲೇಖಕಿ ಪದ್ಮಾ ಕಬಾಡಿ ಅವರ ಮನೆಯಲ್ಲಿ ಹಮ್ಮಿಕೊಂಡಿದ್ದ 'ಮನೆಯಂಗಳದಲ್ಲಿ ಸಾಹಿತ್ಯ' ಕಾರ್ಯಕ್ರಮದಲ್ಲಿ ಲಕ್ಷ್ಮಣಸಾ ಕಬಾಡಿಯವರ 46ನೇ ಪುಣ್ಯಾರಾಧನೆ ನಿಮಿತ್ತ ಅವರ ಬದುಕು ಮತ್ತು ಸಾಧನೆಯ ಕುರಿತು ಉಪನ್ಯಾಸ ನೀಡಿದರು.

ಅತಿಥಿಗಳಾಗಿ ಆಗಮಿಸಿದ್ದ ಗದಗ ಜಿಲ್ಲಾ ಕಸಾಪ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಲಕ್ಷ್ಮಣಸಾ ಕಬಾಡಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಗದುಗಿನಲ್ಲಿ ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಆಗಿ ಹೋಗಿದ್ದಾರೆ. ಅವರ ಸಾಲಿಗೆ ನಿಲ್ಲುವ ವ್ಯಕ್ತಿತ್ವ ಲಕ್ಷ್ಮಣಸಾ ಕಬಾಡಿ ಅವರದ್ದು. ಮನೆಗೆ ಮಾತ್ರ ಸೀಮಿತವಾಗಿ ಅವರು ಉಳಿಯಬಾರದು.

ಅವರ ಸಾಧನೆ ಸಾರ್ವಜನಿಕರಿಗೆ ಮುಟ್ಟುವಂತಾಗಲಿ, ಮುಂಬರುವ ದಿನಗಳಲ್ಲಿ ಅವರ ಪುಣ್ಯಸ್ಮರಣೆಯನ್ನು ಸಾರ್ವತ್ರಿಕವಾಗಿ ಆಚರಿಸುವ ವ್ಯವಸ್ಥೆ ಆಗಲಿ. ತನ್ಮೂಲಕ ಅವರ ಹೆಸರು ಮುಖ್ಯವಾಹಿನಿಗೆ ಬರಲಿ ಎಂದು ಹೇಳಿದರು.

ಇನ್ನೋರ್ವ ಅತಿಥಿ ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಶಿವಾನಂದ ಗಿಡ್ನಂದಿ ಮಾತನಾಡಿ, ಗದುಗಿನ ಸ್ಥಳ ಮಹಿಮೆ ಮತ್ತು ಸ್ವಾತಂತ್ರ್ಯಕ್ಕೆ ಗದುಗಿನ ಕೊಡುಗೆಯನ್ನು ನೆನೆದು, ಆ ಸಾಲಿನಲ್ಲಿ ನಿಲ್ಲಬೇಕಾದ ವ್ಯಕ್ತಿತ್ವ ಲಕ್ಷ್ಮಣಸಾ ಕಬಾಡಿ ಅವರದ್ದು. ಅವರನ್ನು ಪ್ರತಿವರ್ಷವೂ ನೆನಯುವ ಕಾರ್ಯವಾಗಬೇಕು ಎಂದು ನುಡಿದರು.

ಹಿರಿಯ ಸಾಹಿತಿಗಳಾದ ಡಾ. ರಾಜೇಂದ್ರ ಗಡಾದ, ಎಂ.ಡಿ. ಮಾದರ, ರತ್ನಾ ಬದಿ, ಭಾಗ್ಯ ಹುರಕಡ್ಲಿ, ರಮಾ ಚಿಗಟಗೇರಿ, ಪದ್ಮಾ ಕಬಾಡಿ ಕವನ ವಾಚನ ಮಾಡಿದರು.

ಆರಂಭದಲ್ಲಿ ಶಾಂತಾ ಬಾಕಳೆ ಪ್ರಾರ್ಥಿಸಿದರು. ಪದ್ಮಾ ಕಬಾಡಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತುಗಳನ್ನಾಡಿದರು. ಎಸ್‌ಎಸ್‌ಕೆ ಸಮಾಜದ ಅಧ್ಯಕ್ಷೆ ಉಮಾ ಬೇವಿನಕಟ್ಟಿ, ಉಪಾಧ್ಯಕ್ಷರಾದ ಸ್ನೇಹಲತಾ ಕಬಾಡಿ, ಗದಗ ತಾಲೂಕಾ ಕಸಾಪ ಸಹಕಾರ್ಯದರ್ಶಿ ಪ್ರೊ. ಡಿ.ಎಸ್. ನಾಯಕ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ವಿಶ್ವನಾಥ ಬೇಂದ್ರೆ ವಂದಿಸಿದರು. ಕಾರ್ಯಕ್ರಮದಲ್ಲಿ ಜಗನ್ನಾಥ ಕಬಾಡಿ, ದುಷ್ಯಂತಸಾ ಕಬಾಡಿ, ಲೀಲಾಬಾಯಿ ಬಾಕಳೆ, ಲಕ್ಷ್ಮೀದೇವಿ ಕಟ್ಟಿಮನಿ, ಕಸ್ತೂರಬಾಯಿ ಮೇಘರಾಜ್, ಸುಮಿತ್ರಾ ಕಬಾಡಿ, ವಿದ್ಯಾ ಕಬಾಡಿ, ಶ್ವೇತಾ ಕಬಾಡಿ, ಪೂಜಾ ಕಬಾಡಿ, ನೈನಾ ಕಬಾಡಿ, ಅಂಬಿಕಾ ಕಬಾಡಿ, ಅನೂಪ ಕಬಾಡಿ, ಅಕ್ಷಯ ಕಬಾಡಿ, ಸುಧಾ ಕಬಾಡಿ, ಭರತ ಕಬಾಡಿ, ಪ್ರವೀಣ ಕಬಾಡಿ, ಬೀನಾ ಕಟ್ಟಿಮನಿ, ವೀಣಾ ಕಬಾಡಿ, ಕಬಾಡಿ ಕುಟುಂಬ, ಬಾಕಳೆ ಕುಟುಂಬ, ಎನ್.ಆರ್. ಖಟವಟೆ, ಎಸ್‌ಎಸ್‌ಕೆ ಸಮಾಜದ ಬಂಧು-ಬಾಂಧವರು ಹಾಜರಿದ್ದರು.

> ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗದಗ ತಾಲೂಕಾ ಕಸಾಪ ಅಧ್ಯಕ್ಷೆ ಡಾ. ರಶ್ಮಿ ಅಂಗಡಿ ಮಾತನಾಡಿ, ಲಕ್ಷ್ಮಣಸಾ ಕಬಾಡಿ ಅವರು ಗದುಗಿನ ಹೆಮ್ಮೆ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದ ಮತ್ತು ಮಡಿದ ಎಷ್ಟೋ ಜನರ ಹೆಸರುಗಳು ಇಂದು ಮರೆಯಾಗಿ ಹೋಗಿವೆ. ಜನಸಾಮಾನ್ಯರೂ ಕೂಡ ತಮ್ಮದೇ ಆದ ರೀತಿಯಲ್ಲಿ ತನು-ಮನ-ಧನ ನೀಡಿ, ಜೀವವನ್ನೂ ಲೆಕ್ಕಿಸದೇ ಹೋರಾಡಿದ್ದಾರೆ. ಅಂತವರು ಎಲೆಮರೆಯಲ್ಲೇ ಉಳಿದುಬಿಟ್ಟಿದ್ದಾರೆ. ಹೊಸ ತಲೆಮಾರಿನ ಸಂಶೋಧನೆಗಳು ಇಂತಹ ಸಾಮಾನ್ಯರತ್ತ ಹೊರಳಲಿ. ಕಬಾಡಿ ಅವರಂತಹ ವ್ಯಕ್ತಿ-ಶಕ್ತಿಗಳು ಸಮಾಜಕ್ಕೆ ಪರಿಚಯವಾಗಲಿ, ಆ ಮೂಲಕ ನಮ್ಮ ಮುಂದಿನ ಪೀಳಿಗೆಗೆ ನಮ್ಮ ದೇಶ-ಭಾಷೆ-ಹೋರಾಟ ಇವುಗಳ ಅರಿವು ಮೂಡುವಂತಾಗಲಿ ಎಂದು ನುಡಿದರು.

ರೈಲಿನಲ್ಲಿ ಹಲ್ಲೆಗೊಳಗಾಗಿದ್ದ ಲಕ್ಷ್ಮೀ ಸೊರಟೂರ

ಮಹಿಳಾ ಸಂಘಟನೆಯಿಂದ ಆತ್ಮಸ್ಥೈರ್ಯ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಅಂಜಲಿ ಹತ್ಯೆ ಆರೋಪಿಯಿಂದ ಹಲ್ಲೆಗೊಳಗಾದ ಮುಳಗುಂದ ಪಟ್ಟಣದ ಚಿಂದಿಪೇಟಿ ಓಣಿಯ ಲಕ್ಷ್ಮೀ ಮಾಹಾಂತೇಶ ಸೊರಟೂರ ಕುಟುಂಬಕ್ಕೆ ಜೀಜಾಮಾತಾ ಟ್ರಸ್ಟ್ ಹಾಗೂ ಅನ್ನಪೂರ್ಣೆಶ್ವರಿ ಮಹಿಳಾ ಸಂಘದ ಸರ್ವ ಸದಸ್ಯರು ಮನೆಗೆ ಭೇಟಿ ನೀಡಿ ಲಕ್ಷ್ಮೀ ಕುಟುಂಬಕ್ಕೆ ಆತ್ಮಸ್ಥೈರ್ಯ ತುಂಬಿದರು.

ಈ ಸಂದರ್ಭದಲ್ಲಿ ಗೀತಾ ಜಾದಾವ ಮಾತನಾಡಿ, ಲಕ್ಷ್ಮೀ ಕುಟುಂಬ ತೀರಾ ಕಡು ಬಡತನದಲ್ಲಿದ್ದು ನಿತ್ಯ ಕೂಲಿ ಕೆಲಸ ಮಾಡಿ ತಮ್ಮ

ಜೀವನ ಸಾಗಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಅಂಜಲಿ ಹತ್ಯೆಗೈದ ಆರೋಪಿ ಲಕ್ಷ್ಮೀ ಅವರಿಗೂ ಹಲ್ಲೆ ನಡೆಸಿರುವುದು ಇನ್ನಷ್ಟು ಸಂಕಷ್ಟ ಅನುಭವಿಸುವಂತಾಗಿದೆ. ವೈದ್ಯಕೀಯ ವೆಚ್ಚವಾಗಿ ಸುಮಾರು 1.50 ಲಕ್ಷ ರೂ ಖರ್ಚಾಗಿದೆ. ಕೂಡಲೇ ಸರಕಾರ ಇವರ ಕುಟುಂಕ್ಕೆ ಸಹಾಯ ನೀಡಬೇಕು ಎಂದರು.

ಅಕ್ಕಮ್ಮಾ ನೀಲಗುಂದ, ರೇಣುಕಾ ಜಾದಾವ, ಶಾಂತವ್ವ ಹಿರೇಮಠ, ಅನಸವ್ವ ಆರೇರ, ಶೈಲಾ ಆರೇರ, ಯಲ್ಲಮ್ಮಾ ಮರಾಠಿ, ನಿರ್ಮಲಾ ಜಾದಾವ, ಲಕ್ಷ್ಮೀ ಜಾದಾವ, ರೇಣುಕಾ ಜಾದಾವ ಹಾಗೂ ಕುಟುಂಬದ ಸರ್ವ ಸದಸ್ಯರು ಇದ್ದರು.

ರೋಟರಿ ಸಹಾಯಕ ಗವರ್ನರ್ ಆಗಿ ರೊ. ಶಿವಾಚಾರ್ಯ ಹೊಸಳ್ಳಿಮಠ ನೇಮಕ

■ ವಿಜಯಸಾಕ್ಷಿ ಸುದ್ದಿ, ಗದಗ

ರೋಟರಿ ಸಂಸ್ಥೆ ಗದಗ-ಬೆಟಗೇರಿಯ ಮಾಜಿ ಅಧ್ಯಕ್ಷರಾದ ರೊ. ಶಿವಾಚಾರ್ಯ ಹೊಸಳ್ಳಿಮಠ ರೋಟರಿ ಜಿಲ್ಲೆ 3170ದ ಸಹಾಯಕ ಗವರ್ನರಾಗಿ 2024-25ನೇ ರೋಟರಿ ಸಾಲಿಗೆ ಆಯ್ಕೆಯಾಗಿದ್ದಾರೆ.

ಇವರ ಸೇವಾ ಅವಧಿಯು ಜುಲೈ 1ರಿಂದ ಪ್ರಾರಂಭವಾಗಲಿದ್ದು, ರೋಟರಿ ಸಂಸ್ಥೆ ಗದಗ-ಬೆಟಗೇರಿ, ರೋಟರಿ ಸಂಸ್ಥೆ ಗದಗ ಸೆಂಟ್ರಲ್ ಹಾಗೂ ರೋಟರಿ ಸಂಸ್ಥೆ ಗಜೇಂದ್ರಗಡ ಇವುಗಳಿಗೆ ಸಹಾಯಕ ಗವರ್ನರಾಗಿ ಮಾರ್ಗದರ್ಶನ ನೀಡುವರೆಂದು ರೋಟರಿ ಜಿಲ್ಲೆ 3170ದ 2024-25ರ ಸಾಲಿನ ಗವರ್ನರರಾದ ರೊ.ಡಾ. ಶರದ್ ಪೈ ಆದೇಶ ನೀಡಿದ್ದಾರೆ.

ರೋಟರಿ ಸಂಸ್ಥೆ ಗದಗ-ಬೆಟಗೇರಿಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿ, ಕಾರ್ಯದರ್ಶಿ ರೊ. ವೀಣಾ ತಿರ್ಲಾಪೂರ ಹಾಗೂ ಸಂಸ್ಥೆಯ ಎಲ್ಲ ಸದಸ್ಯರು ರೊ. ಶಿವಾಚಾರ್ಯ ಹೊಸಳ್ಳಿಮಠರವರಿಗೆ ಅಭಿನಂದನೆಗಳನ್ನು ತಿಳಿಸಿದ್ದು, ಇವರ ಮಾರ್ಗದರ್ಶನದಲ್ಲಿ ಸಂಸ್ಥೆಗಳು ಇನ್ನೂ ಹೆಚ್ಚಿನ ಸಾಮಾಜಿಕ ಕಾರ್ಯಗಳನ್ನು ಮಾಡಲಿ ಎಂದು ಹಾರೈಸಿದ್ದಾರೆ.

ವ್ಯತ್ಯಾಸ ವೇತನ ಪಾವತಿಸಲು ಮನವಿ

■ ವಿಜಯಸಾಕ್ಷಿ ಸುದ್ದಿ, ಗದಗ

ನಿವೃತ್ತ ನೌಕರರಿಗೆ 2020ರ ಹೊಸ ಕೈಗಾರಿಕಾ ವೇತನ ಒಪ್ಪಂದದ ಅನ್ವಯ ವ್ಯತ್ಯಾಸದ ಹಣ ಪಾವತಿಸಬೇಕೆಂದು ಬೆಮಸಾ, ಕರಾಸಾ ಮತ್ತು ವಾಕರಸಾ ಸಾರಿಗೆ ನಿವೃತ್ತ ನೌಕರರ ಸಂಘವು ಹುಬ್ಬಳ್ಳಿಯ ವಾ.ಕ.ರ.ಸಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿತು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿವೃತ್ತ ನೌಕರರ ಸಂಘದ ಸಂಚಾಲಕ ಎಚ್.ಸಿ. ಕೊಪ್ಪಳ ಹಾಗೂ ಹನಮಂತಪ್ಪ ಎಚ್. ದೊಡ್ಡಮನಿ ಅವರ ನೇತೃತ್ವದಲ್ಲಿ ಎಲ್ಲ ನಿವೃತ್ತ ನೌಕರರು ಹುಬ್ಬಳ್ಳಿಯ ವಾ.ಕ.ರ.ಸಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಿದರು.

ಸರಕಾರದ ಹೊಸ ಕೈಗಾರಿಕಾ ವೇತನ ಒಪ್ಪಂದದ

ಪ್ರಕಾರ 2020ರಿಂದ ಹಾಲಿ ನೌಕರರು ಈ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ಕೇಂದ್ರ ಕಚೇರಿಯ